ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಲ್ಯಾಣ ಕಿರಣ

ಏಪ್ರಿಲ್ 2011 ಬೆಲೆ : 10/-









|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-41	ಬಸವ ಶಕೆ -877	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-04	ಏಪ್ರಿಲ್ - 2011	ವಾರ್ಷಿಕ ಚಂದಾ 100 ರೂ.

ಸ್ಫೂರ್ತಿ ಗಂಗೋತ್ರಿ

ಶ್ರೀ ಅಕ್ಕಮಹಾದೇವಿ ನೀ ನಮ್ಮ ಮುನ್ನಡೆಸು
ಮಾತಾಯಿ ಸ್ತ್ರೀಕುಲದ ಸ್ಫೂರ್ತಿ ಗಂಗೋತ್ರಿ || ಪ ||

ಹೆಣ್ಣು ಮಾಯೆಯು ಎಂಬ ಸೊಲ್ಲುಗಳ ಮೆಟ್ಟುತ
ಕಣ್ಣು ತೆರೆಸಿದ ಮಾತೆ ವಿಖ್ಯಾತ ಚರಿತೆ || ಅ.ಪ ||

ಉಡುತಡಿಯ ಓಂಕಾರ ಝೇಂಕರಿಸಿ ಹರಿಯೆ
ಒಡಲು ತಾ ಬೆಳೆಯಿತು ಲಿಂಗಮ್ಮ ತಾಯಿಯಲಿ
ಒಡಗೂಡಿ ಸುಜ್ಞಾನ ಸಡಗರಿಸಿ ದನಿಯಿತು
ಮೃಡನ ಚೇತನ ನಿನ್ನ ನರತಂತುಗಳ ಮೀಂಟಿ || 1 ||

ಉಗಮಿಸಿದ ನಿನ್ನೊಡಲು ಸುಳಿದೆಗೆದು ಬೆಳೆಯಿತು
ಪ್ರಗತಿಯಂ ಸಾಧಿಸುತ ದಿನದಿನಕೆ ಸೊಬಗೇರಿ
ಭಕ್ತಿ-ಜ್ಞಾನದ ಸೆಲೆಯು ಹೊಮ್ಮಿ ಹರಿಯುತ್ತಿರಲು
ಚೊಕ್ಕ ವೈರಾಗ್ಯದಿಂ ಮಲ್ಲಿಕಾರ್ಜುನಗೊಲಿದೆ || 2 ||

ಸಂಕಲ್ಪದೊಳು ಮೇರು ಸೌಂದರ್ಯದೊಳು ಹಂಸೆ
ಶಿವ ಭಕ್ತಿಯಲ್ಲಿ ನೀನು ಪ್ರೇಮ ಸಾಮ್ರಾಜ್ಞಿ
ವೈರಾಗ್ಯ ಭಾವದಲ್ಲಿ ಗೌರಿಶಂಕರವಾದೆ
ಹೃದಯ ನಿನ್ನದು ಶಿವಗೆ ಮಾನಸ ಸರೋವರ || 3 ||

ಅನುಭಾವ ಮಂಟಪದ ಅಮರ ಜ್ಯೋತಿಯು ಆದೆ
ಸ್ವಾನುಭವ ಜೇನನ್ನು ವಚನ ರೂಪದಿ ಇತ್ತೆ
ಚಿಜ್ಯೋತಿ ಬಸವನ ಕಾರುಣ್ಯ ಸುತೆಯಾದೆ
ಬಸವ ಧರ್ಮದ ಕೀರ್ತಿ ದುಂದುಭಿಯ ಮೊಳಗಿದೆ || 4 ||

- ಮಾತಾಜಿ

ಅಕ್ಕನ ಅಮರವಾಣಿ

ಅರಿಯದವರೊಡನೆ ಸಂಗವ ಮಾಡಿದೊಡೆ
ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ;
ಬಲ್ಲವರೊಡನೆ ಸಂಗವ ಮಾಡಿದೊಡೆ
ಮೊಸರ ಹೊಸೆದು ಬೆಣ್ಣೆಯ ತೆಗೆದು ಕೊಂಬಂತೆ;
ಚನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ಸಂಗವ ಮಾಡಿದಡೆ
ಕರ್ಪೂರದ ಗಿರಿಯನುರಿಯ ಕೊಂಬಂತೆ!

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಪುಣೆಯ ವಿಳಾಸಗಳು

ಪೂನಾ ನಗರದಲ್ಲಿ ಮತ್ತು ಸುತ್ತಮುತ್ತಲ ಊರುಗಳಲ್ಲಿ ನೆಲೆಸಿರುವ ಬಂಧು -ಮಿತ್ರ, ಪರಿಚಿತರ ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ತಿಳಿಸಿರಿ. ಅವರನ್ನು ಸಂಪರ್ಕಿಸಿ ಆಹ್ವಾನ ಕಳಿಸಲು ಅನುಕೂಲವಾಗುತ್ತದೆ.

ಏಪ್ರಿಲ್ ತಿಂಗಳಲ್ಲಿ ಬರುವ ಹಬ್ಬ -ಹುಣ್ಣಿಮೆ -ಉತ್ಸವಗಳು

1.	ಅಲ್ಲಮಪ್ರಭು ಜಯಂತಿ (ಯುಗಾದಿ)	ಏಪ್ರಿಲ್ -4
2.	ಮಹಾರಾಷ್ಟ್ರದ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳಾವ	ಏಪ್ರಿಲ್-4,5 ಮತ್ತು 6
3.	ಅಕ್ಕಮಹಾದೇವಿ ಜಯಂತಿ	ಏಪ್ರಿಲ್ - 18
4.	ಧಾರವಾಡದಲ್ಲಿ ಶರಣೋತ್ಸವ	ಏಪ್ರಿಲ್ 30, ಮೇ 1, 2

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 8970898205, 7760627640, 8892912123

ಬಸವ ವಚನಾಮೃತ

(ಡಿಸೆಂಬರ್ 2010ರಿಂದ ಮುಂದುವರಿದಿದೆ. ಸಮಯಾಭಾವದಿಂದ ಜನವರಿ ಸಂಚಿಕೆಯಲ್ಲಿ ಮುದ್ರಣಗೊಳ್ಳಲಿಲ್ಲ; ಫೆಬ್ರವರಿ ಸಂಚಿಕೆಯು ಮುದ್ರಣಗೊಳ್ಳಲಿಲ್ಲ. ಮಾರ್ಚ್ ಸಂಚಿಕೆಗೆ ಸಮಯಾಭಾವದಿಂದ ಬರೆಯಲಾಗದುದಕ್ಕೆ ವಿಷಾದಿಸುತ್ತೇನೆ -ಮಾತಾಜಿ)

555. ಕ್ಷುದ್ರ ದೈವಂಗಳಲ್ಲಿ ಬೇಡಿಕೆ ವ್ಯರ್ಥ

ಗಾಡಿಗ ಡಿಂಬುಗಂಗೆ ಚಿಕ್ಕು ಮುಟ್ಟಿಗೆ
ಹಸುರಂಬಲಿ ಮುಟ್ಟಿಗೆ, ಹುರಿಬುತ್ತಿಯ ಬೇಡಿ,
ಮನುಷ್ಯರ ಪಿಡಿದು ಪೀಡಿಸಿ, ತಮ್ಮ ಬಸುರ್ಗೆ ಕಾಣದೆ,
ಈಡಾಡಿದ ಕೂಳಂಬಲಿಯನಾಯ್ದು ಕುರುಕುವ
ಹೇಸಿ ದೈವಂಗಳ ಬೇಡಿ ಬೇಡಿ ನಿರರ್ಥಕ ಕೆಡಬೇಡೆಲವೊ;
ಲಿಂಗದೇವರ ನೆರೆನಂಬುವುದೆಲವೊ -ಬ.ವ.ದೀ. 553

ಗಾಡಿಗ ಎಂದರೆ ಮಾಟಗಾರ ಎಂದು ಅರ್ಥ ಮಾಡಲಾಗಿದೆ. ಹೀಗೂ ಅರ್ಥಮಾಡಬಹುದು. ಚಿಕ್ಕ ಚಿಕ್ಕ ಗಾಡಿಗಳ ಮೇಲೆ ದೇವತೆಗಳ ವಿಗ್ರಹ ಇಟ್ಟುಕೊಂಡು ಬೇಡುತ್ತಾ ತಿರುಗುವವನು ಎಂದು. (ಬೆಂಗಳೂರಿನಂಥ ಪಟ್ಟಣದಲ್ಲಿ - ಮೂಢ ನಂಬಿಕೆಗಳು ವಿಪುಲವಾಗಿದ್ದು ಶನೀಶ್ವರ, ಶಿರಡಿ ಸಾಯಿಬಾಬಾ ಮುಂತಾದವರ ಫೋಟೋಗಳನ್ನಿಟ್ಟುಕೊಂಡು ಕೆಲವರು ತಿರುಗುವರು. ಕೆಲವು ಶ್ರೀಮಂತ ವ್ಯಾಪಾರಿಗಳು ಇಂಥ ತಳ್ಳುಗಾಡಿಗಳನ್ನು ಮಾಡಿಸಿ ಜನರನ್ನು ಅಲ್ಲಲ್ಲೇ ಬಿಡುವರಂತೆ. ಸಂಜೆ ಬಂದು ಅವರಿಗೆ ಕೊಡುವ ಕೂಲಿ ಕೊಟ್ಟು ಹಣವನ್ನು ಸಂಗ್ರಹಿಸಿಕೊಂಡು ಹೋಗುವರಂತೆ.) ಗಾಡಿಗ, ಡಿಂಬುಗ ಎಂಬ ಕ್ಷುದ್ರ ದೈವಂಗಳನ್ನು (petty god)ಹೊತ್ತು ಓಡಾಡುವವರು ಜನಗಳ ಬಳಿ ಬಂದು ಕೆಲವು ಬೇಡಿಕೆ ಸಲ್ಲಿಸುವುದುಂಟು. ಡಿಂಬು ಎಂದರೆ ಉರಿಯುವ ದೀಪ. ಅದನ್ನು ಹಿಡಿದುಕೊಂಡು ಬಂದು, ದೀಪಕ್ಕೆ ಎಣ್ಣೆ ಹಾಕಿರಿ ಎಂದು ಕೆಲವರು ಬೇಡುವುದುಂಟು. ಎಣ್ಣೆ ಬೇಡುವ ದೀಪಧಾರಿ ದಾಸಯ್ಯನವರನ್ನು ನಾನು ನೋಡಿದ್ದೇನೆ. ಇವುಗಳನ್ನು ಹೊತ್ತು ತರುವ ಕೆಲವರು ಈ ದೈವಂಗಳಿಗೆ ಚಿಕ್ಕುಮುಟ್ಟಿಗೆ ಎಂದರೆ ಮುಷ್ಠಿ. ಅನ್ನವನ್ನು ಮಾಡಿ ಅದಕ್ಕೆ ತುಪ್ಪ, ಉಪ್ಪು ಹಾಕಿ ಚೆನ್ನಾಗಿ ಮಿದ್ದಿ ಆ ಮೇಲೆ ಮುಷ್ಠಿಯಲ್ಲಿ ಹಿಡಿದು ಒತ್ತಿ ಇಡುವುದು ಚಿಕ್ಕು ಮುಟ್ಟಿಗೆ, ಇದರಲ್ಲಿ ಸೊಪ್ಪನ್ನು ಹಾಕಿ ಕುದಿಸಿ ಮುಟಗೆ ಮಾಡುವುದು ಹಸುರಂಬಲಿ ಮುಟ್ಟಿಗೆ, ಧಾನ್ಯಗಳನ್ನು ಹುರಿದು ಹಿಟ್ಟುಮಾಡಿ ಅದರಲ್ಲಿ ಸಕ್ಕರೆ (ಬೆಲ್ಲ), ಏಲಕ್ಕಿ ಮುಂತಾಗಿ ಬೆರೆಸಿ ಮಾಡುವುದು ಹುರಿಬುತ್ತಿ. (ನಾವು ಸಣ್ಣವರಿದ್ದಾಗ ಶಾಲೆಗೆ ಹೋಗುವಾಗ ಹುರಿ ಹಿಟ್ಟನ್ನು ಹಾಲಿನಲ್ಲಿ ಕಲಸಿ, ಉಂಡೆ ಮಾಡಿ ತಿನ್ನಲು ಕೊಡುತ್ತಿದ್ದರು.) 'ನಮ್ಮ ದೇವರಿಗೆ ಇಂಥ ತಿಂಡಿ ಬೇಕು.' ಎಂದು ಮನುಷ್ಯರಿಗೆ ಕಾಡಿಸಿ, ಪೀಡಿಸುವರು. ತಮ್ಮ ಹೊಟ್ಟೆಗೇ ನೆಟ್ಟಗಿಲ್ಲದ ಇವರು ಇತರರು ಕೊಟ್ಟ ಕೂಳನ್ನು, ಅಂಬಲಿಯನ್ನು ಪಡೆದು ಚಪ್ಪರಿಸುತ್ತ "ನಿಮಗೆ ಬೇಡಿದ ವರ ಕೊಡುತ್ತೇವೆ" ಎಂಬ ಆಶ್ವಾಸನೆ ಬೇರೆ ನೀಡುವರು.

ಅದಕ್ಕಾಗಿ ಗುರು ಬಸವಣ್ಣನವರು ಹೇಳುವರು, "ಇಂಥ ಕ್ಷುದ್ರ ದೈವಗಳನ್ನು ನಂಬಿ ಬೇಡಿ ಬೇಡಿ ಕೆಡಬೇಡ. ಸೃಷ್ಟಿಕರ್ತನಾದ ಲಿಂಗದೇವನನ್ನು ನಂಬು" ಎಂದು.

556. ಲಿಂಗದೇವಂಗೆ ಶರಣೆಂಬುದೇ ದಡಿ

ಹಾಳು ಮೊರಡಿಗಳಲ್ಲಿ ಊರ ದಾರಿಗಳಲ್ಲಿ
ಕೆರೆ ಬಾವಿ ಹೂಗಿಡ ಮರಂಗಳಲ್ಲಿ
ಗ್ರಾಮಮಧ್ಯಗಳಲ್ಲಿ ಚೌಪಥ ಪಟ್ಟಣ ಪ್ರವೇಶದಲ್ಲಿ
ಹಿರಿಯಾಲದ ಮರದಲ್ಲಿ ಮನೆಯ ಮಾಡಿ,
ಕರೆವೆಮ್ಮೆ ಹಸುಗೂಸು, ಬಸುರಿ, ಬಾಣತಿ,
ಕುಮಾರಿ ಕೊಡಗೂಸೆಂಬವರ ಹಿಡಿದುಂಬ ತಿರಿದುಂಬ
ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರ ಬೆಂತರ
ಕಾಳಯ್ಯ ಧೂಳಯ್ಯ, ಮಾಳಯ್ಯ ಕೇತಯ್ಯಗಳೆಂಬ ನೂರು ಮಡಕೆಗೆ
ನಮ್ಮ ಲಿಂಗದೇವರಿಗೆ ಶರಣೆಂಬುವುದೊಂದೆ ದಡಿ ಸಾಲದೆ ?

ಬ.ವ.ದೀ. 554

ಧರ್ಮಗಳಲ್ಲಿ ಬಣ ಧರ್ಮ (Tribal Religion) ಮತ್ತು ಗಣ ಧರ್ಮ (Universal Religion) ಎಂದು ಎರಡು ಬಗೆ. ಮಾನವ ಸಮಾಜವು ಮೊದಲು ಬುಡಕಟ್ಟು (Tribes) ಗಳ ರೂಪದಲ್ಲಿತ್ತು, ನಂತರ ಬುದ್ಧ, ಮಹಾವೀರ, ಏಸುಕ್ರಿಸ್ತ, ಮೊಹಮ್ಮದ್ ಪೈಗಂಬರ್, ಗುರು ಬಸವಣ್ಣ, ಗುರುನಾನಕ ಮುಂತಾದವರಿಂದ ವಿಶಾಲ ಸ್ವರೂಪವನ್ನು ಪಡೆದು ಆ ಬುಡಕಟ್ಟುಗಳನ್ನು ಒಳಗೊಂಡು ಗಣ ಧರ್ಮಗಳು ಬೆಳೆದವು. ಬುಡಕಟ್ಟುಗಳವರು ತಮ್ಮ ತಮ್ಮ ಗುಂಪುಗಳಿಗೆ ಬೇರೆ ಬೇರೆ ದೈವಗಳನ್ನು ಇರಿಸಿಕೊಳ್ಳುತ್ತಿದ್ದರು. ಅವೇ ಮಾರಯ್ಯ, ಬೀರಯ್ಯ, ಕಾಳಯ್ಯ, ಧೂಳಯ್ಯ, ಮಾಳಯ್ಯ, ಕೇತಯ್ಯ, ಮುಂತಾದವು. ಇವುಗಳಿಗೆ ಪುಟ್ಟ ಪುಟ್ಟ ಗುಡಿಗಳನ್ನು ಕಟ್ಟಿಕೊಳ್ಳುತ್ತಿದ್ದರು. ಚಿಕ್ಕ ಚಿಕ್ಕ ಮೊರಡಿ (ಗುಡ್ಡ) ಗಳ ಮೇಲೆ, (ಕಮಲಗಂಗಾ) ಭಾವಿ ಕಟ್ಟಡದಲ್ಲಿ ಒಂದು ಗೂಡು ಮಾಡಿ ಅದರೊಳಗೆ, ಹೂ ಗಿಡಗಳು ಮರಗಳ ತೋಪುಗಳಲ್ಲಿ, ಗ್ರಾಮ ಮಧ್ಯದಲ್ಲಿ ನಾಲ್ಕು ದಾರಿಗಳು ಕೂಡುವಲ್ಲಿ ಹೀಗೆಲ್ಲ ಗೊಂಬೆಗಳನ್ನು ಮಾಡಿ ಇಟ್ಟು ಪೂಜಿಸುತ್ತಿದ್ದರು. ಕಡೆಗೆ ಒಂದು ಗುಂಡು ಕಲ್ಲನ್ನು ಇಟ್ಟು ಅದನ್ನೇ ದೈವವೆಂದು ತಿಳಿದು ಪೂಜಿಸುತ್ತಿದ್ದರು.

ಊರಲ್ಲಿ ಒಂದು ವಿಶಾಲವಾಗಿ ಬಿಳಿಲು ಬಿಟ್ಟು ಬೆಳೆದ ಆಲದ ಮರ ಇದ್ದರೆ ಬಗೆ ಬಗೆಯ ಕಥೆಗಳು ಹಬ್ಬುತ್ತಿದ್ದವು. ಆ ಆಲದ ಮರದಲ್ಲಿ ದೆವ್ವ, ಭೂತ, ಬ್ರಹ್ಮರಾಕ್ಷಸ ಇದೆ. ಅಲ್ಲಿ ಹಾಯುವ ಕರೆಯುವ ಎಮ್ಮೆ ಚಿಕ್ಕ ಮಕ್ಕಳು, ಬಸುರಿ ಹೆಣ್ಣುಮಕ್ಕಳು, ಬಾಣಂತಿಯರು ಬಾಲಿಕೆಯರು ಋತುಮತಿಯಾಗಿ ಮದುವೆಗೆ ಸಿದ್ಧರಾದ (ಕೊಡುವ ಕೂಸು) ಕೊಡಗೂಸು ಮುಂತಾದವರು ಓಡಾಡುತ್ತಿದ್ದರೆ ಹಿಡಿದುಕೊಂಡು ಬಿಡುವ ದೈವಗಳಿವೆ ಎಂದೆಲ್ಲ ಸುದ್ದಿ ಹಬ್ಬಿರುವುದು. ಇನ್ನು ಮನೆ ಮನೆ ತಿರುಗಿ ಭಿಕ್ಷೆ ಬೇಡಿ ಉಣ್ಣುವ ದೈವಗಳಾದ ಮಾರಯ್ಯ, ಬೀರಯ್ಯ, ಕೇಚರ,

ಗಾವಿಲ ಅಂತರ ಬೆಂತರ ಕಾಳಯ್ಯ, ಧೂಳಯ್ಯ, ಮಾಳಯ್ಯ, ಕೇತಯ್ಯಗಳೆಂಬುವು ಅಸ್ತಿತ್ವವಿಲ್ಲದ, ಸತ್ವವಿಲ್ಲದ ದೈವಂಗಳು. ಇಂಥ ದೈವಂಗಳೆಂಬ ನೂರು ಮಡಿಕೆಗೆ ಸೃಷ್ಟಿಕರ್ತನಿಗೆ ಶರಣು ಎಂಬ ಒಂದು ಕೋಲಿ (ದಡಿ) ನೇಟು ಸಾಕು ಎನ್ನುತ್ತಾರೆ ಗುರು ಬಸವಣ್ಣನವರು.

ಇವೆಲ್ಲ ಭಯೋತ್ಪಾದಕ ದೈವಂಗಳು. ಸೃಷ್ಟಿಕರ್ತನಾದ ಲಿಂಗದೇವನು ಭಕ್ತಿಪ್ರೇರಿತ. ಗಣ ಧರ್ಮವು ಮೂಢನಂಬಿಕೆಗಳಿಲ್ಲದ ವೈಚಾರಿಕ ಧರ್ಮವಾಗಿರುತ್ತದೆ.

557. ಲಿಂಗದೇವನೊಬ್ಬನೇ ದೇವ.

ಅರಗು ತಿಂದು ಕರಗುವ ದೈವವನೆಂತು ಸರಿಯೆಂಬೆನಯ್ಯಾ?
ಉರಿಯ ಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ?
ಅವಸರ ಬಂದಡೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ?
ಅಂಜಿಕೆಯಾದಡೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ?
ಸಹಜಭಾವ ನಿಜೈಕ್ಯ ಲಿಂಗದೇವನೊಬ್ಬನೆ
ದೇವ ಕಾಣಿರೊ. ಬ.ವ.ದೀ. 555

ಗಣ ಧರ್ಮಗಳು ಹಬ್ಬುತ್ತಾ ಬಂದಾಗ ಜಗತ್ತಿನ ಇತರ ಕಡೆ ಬುಡಕಟ್ಟು ಧರ್ಮ, ಅವುಗಳ ಆಚರಣೆ ನಶಿಸಿ ಹೋದವು. ಭಾರತದಲ್ಲಿ ಬುಡಕಟ್ಟು ಆಚರಣೆ, ಪೌರಾಣಿಕ ನಂಬಿಕೆ ಎಲ್ಲ ಉಳಿದು ಮೂಢ ನಂಬಿಕೆ ವಿಪರೀತವಾಗಿ ಬೆಳೆದಿದೆ.

ಅರಗಿನಿಂದ ದೇವತಾ ವಿಗ್ರಹಗಳನ್ನು ಮಾಡಿ ಅದಕ್ಕೆ ಹಿತ್ತಾಳೆಯ ಲೇಪನ ಮಾಡುವರು ಇಲ್ಲವೇ ಬಣ್ಣ ಬಳಿಯುವರು. ಅರಗಿನ ಗೊಂಬೆಗಳು ಉರಿಯು ಬಡಿಯುತ್ತಲೇ ಕರಗಿ ಹೋಗಿ ಕರುಕಾಗುವವು. ಕಟ್ಟಿಗೆಯಿಂದ ಬಟ್ಟೆಗಳಿಂದ ಮಾಡಿದ ದೈವಂಗಳು ಉರಿಯ ಜ್ವಾಲೆಗೆ ಸುಟ್ಟು ಹೋಗುವವು. ಬಂಗಾರ ಬೆಳ್ಳಿಗಳಲ್ಲಿ ದೇವತಾ ವಿಗ್ರಹ ಮಾಡಿ ಆರಾಧಿಸುವರು. ಆರ್ಥಿಕ ತೊಂದರೆ ಬಂದರೆ ಅವನ್ನು ಮಾರಿಕೊಂಡೂ ಬಿಡುವರು. ಕೆಲವು ದೈವಗಳನ್ನು ಯಾರದಾದರೂ ಹೇಳಿಕೆಯ ಮೇರೆಗೆ ಪೂಜಿಸ ತೊಡಗಿ, ಕಾಕತಾಳೀಯ ನ್ಯಾಯದಂತೆ ಏನಾದರೂ ಕೆಡುಕಾದರೆ ಅವನ್ನು ಒಯ್ದು ಸಮಾಧಿ ಮಾಡುವರು.

ನಾನು ಚಿಕ್ಕವಳಿದ್ದಾಗ ನಡೆದ ಒಂದು ಘಟನೆ. ನಮ್ಮ ಅಜ್ಜಿ (ರುದ್ರಮ್ಮ) ಬಹಳ ಮೂಢನಂಬಿಕೆಯವರು. ಸಾಮಾನ್ಯವಾಗಿ ಒಂದಲ್ಲ ಒಂದು ಕಾರಣ ಹೇಳಿ ನರಳುವ ಸ್ವಭಾ ಅವರದು. ಯಾವಾಗಲೂ ಭವಿಷ್ಯ ಕೇಳುವ ಪ್ರವೃತ್ತಿ. ಒಮ್ಮೆ ಒಬ್ಬಾತ ಹೇಳಿದ, "ಕುದುರೆ ಲಾಳ ತಂದು ಅದರಲ್ಲಿ ಶನಿಯ ಚಿತ್ರ ಬಿಡಿಸಿ ಅದನ್ನು ನಿತ್ಯ ಪೂಜೆ ಮಾಡಿರಿ." ಎಂದು. ಅದರಂತೆ ಮಾಡಿದರು. ಕಷ್ಟಗಳು ಹೆಚ್ಚಾದಂತೆ ಎನಿಸಿತು. ಪುನಃ ಜ್ಯೋತಿಷಿಯನ್ನು ಕೇಳಿದಾಗ, "ಶನಿಯ ಆ ಚಿತ್ರವನ್ನು ಸಮಾಧಿ ಮಾಡಿರಿ." ಎಂದ. ಒಂದು ದಿನ ವಿಧ್ಯುಕ್ತವಾಗಿ ಸಮಾಧಿ ಮಾಡಿದರು. "ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ?" ಎಂಬ ಬಸವ ವಾಣಿಗೆ ಸೂಕ್ತ ಉದಾಹರಣೆ ಇದು. ಇವೆಲ್ಲವೂ ಮಾನವನ ಕಲ್ಪನೆಯ ಕೂಸುಗಳು. ಮಾನವರೆಲ್ಲರನ್ನು ಸೃಷ್ಟಿಸಿರುವ ಲಿಂಗದೇವನು ಒಬ್ಬನೆ! ಅವನು ಸಹಜಭಾವದಿಂದ ಇರುವ ನಿಜವು ಮತ್ತು ಏಕನು. ಅವನನ್ನು ನಂಬಿ ಪೂಜಿಸುವುದು ಶ್ರೇಷ್ಠ.

558. ಮಾರಿಕವ್ವೆ

ಮಾರಿಕವ್ವೆಯ ನೋಂತು ಕೊರಳಲ್ಲಿ ಕಟ್ಟಿಕೊಂಬರು,
ಸಾಲಬಟ್ಟಡೆ ಮಾರಿಕೊಂಬರಯ್ಯಾ!
ಸಾಲಬಟ್ಟಡೆ ಅವನೊತ್ತೆಯಿಟ್ಟು ಕೊಂಡುಂಬರಯ್ಯಾ!
ಮಾರುವೋಗನೊತ್ತೆ ಹೋಗ
ನಮ್ಮ ಲಿಂಗದೇವ. ಬ.ವ.ದೀ. 556

ಮಾರಿಕಾಂಬೆ (ದೇವಿ)ಯ ಸಂಕೇತವಾಗಿ ಬಂಗಾರ, ಬೆಳ್ಳಿಯ ಪದಕಗಳನ್ನು ವ್ರತ (ನೋಂಪಿ)ವನ್ನು ತಾಳಿ ಧರಿಸಿಕೊಳ್ಳುತ್ತಿದ್ದರು ಎಂದು ಊಹಿಸಬಹುದು. ಏನಾದರೂ ಆರ್ಥಿಕ ಸಂಕಷ್ಟಬಂದಾಗ ಆ ಪದಕಗಳನ್ನು ಮಾರಿಕೊಳ್ಳುತ್ತಿದ್ದರು. ಎಂದು ತೋರುತ್ತದೆ. ಕೆಲವೊಮ್ಮೆ ಸಾಲ ಪಡೆಯಲು ಆ ಪದಕಗಳನ್ನು ಒತ್ತೆ ಇಡುತ್ತಿದ್ದರು. ಸೃಷ್ಟಿಕರ್ತ ಲಿಂಗದೇವನನ್ನು ಯಾರೂ ಮಾರಲಾಗಲಿ, ಒತ್ತೆ ಇಡಲಾಗಲಿ ಸಾಧ್ಯವಿಲ್ಲ. ಅದೇ ರೀತಿ ಅವನ ಕುರುಹಾದ ಇಷ್ಟಲಿಂಗವನ್ನು ಸಹ ಮಾರಲು, ಒತ್ತೆ ಇಡಲು ಆಗದು. ಬಡವರಿಗೂ ನಿಲುಕುವ ಬೆಲೆಯುಳ್ಳದು ಇಷ್ಟಲಿಂಗ.

559. ಮಾರಿಕವ್ವೆ ಕಾಯುವವಳೆ?

ಉಣಲುಡಲು ಮಾರಿಯಲ್ಲದೆ ಕೊಲಲು ಕಾಯಲು ಮಾರಿಯೆ?
ತನ್ನ ಮಗನ ಜವನೊಯ್ದಲ್ಲಿ ಅಂದೆತ್ತ ಹೋದಳಾ ಮಾರಿಕವ್ವೆ?
ಈವಡೆ ಕಾವಡೆ ನಮ್ಮ ಲಿಂಗದೇವನಲ್ಲದೆ
ಮತ್ತೊಂದು ದೇವರಿಲ್ಲ. ಬ.ವ.ದೀ. 557

ಕೆಲವರು ಬುಟ್ಟಿಗಳಲ್ಲಿ ಸ್ತ್ರೀದೇವತೆಯ ವಿಗ್ರಹ ಇಟ್ಟುಕೊಂಡು ಕಾಲಲ್ಲಿ ಗೆಜ್ಜೆಕಟ್ಟಿಕೊಂಡು ಬೇಡುತ್ತ ಬರುವರು. "ದೇವಿಗೆ ಊಟ ಕೊಡ್ರೇಯವ್ವಾ" ಎಂದು ಊಟವನ್ನು ಕೇಳುವರು. ಇಷ್ಟರ ಪೂರ್ತಿ ಉಣ್ಣಲು, ಉಡಲು ಮಾರಿಕವ್ವೆಯು ಉಪಯೋಗಕ್ಕೆ ಬರುವಳು. ಆದರೆ, ಮೃತ್ಯು ಬಂದು ಒದಗುವಲ್ಲಿ, ತಪ್ಪಿಸಲು ಸಂಕಷ್ಟ ಬಂದಾಗ ಕಾಯುವ ಸಾಮರ್ಥ್ಯ ಆಕೆಗಿಲ್ಲ. ಸ್ವತಃ ಆಕೆಯ ಮಗನನ್ನು ಸಾವು(ಯಮ) ಒಯ್ಯುವಾಗ ಆಕೆಗೆ ಉಳಿಸಿಕೊಳ್ಳಲು ಆಗಲಿಲ್ಲ. ನಮಗೆ ಬೇಕಾದುದನ್ನು ಕೊಡುವ ಸಾಮರ್ಥ್ಯ, ಸಂಕಷ್ಟ ಬಂದಾಗ ಸಂರಕ್ಷಿಸುವ ಸಾಮರ್ಥ್ಯ ಇರುವುದು ಸೃಷ್ಟಿಕರ್ತನಾದ ಲಿಂಗದೇವನಿಗೆ ಮಾತ್ರ!

560. ಕುರಿ ಸತ್ತು ಕಾಯುವುದೆ?

ಮರನ ಗೋಟಿಗೆ ಬಪ್ಪ ಕಿರುಕುಳ ದೈವಕ್ಕೆ
ಕುರಿಯನಿಕ್ಕಿಹೆವೆಂದು ನಲಿನಲಿದಾಡುವರು;
ಕುರಿ ಸತ್ತು ಕಾವುದೆ ಹರ ಮುಳಿದವರ?
ಕುರಿ ಬೇಡ ಮರಿ ಬೇಡ;
ಬರಿ ಪತ್ರೆಯ ತಂದು ಮರೆಯದೆ ಪೂಜಿಸು
ನಮ್ಮ ಲಿಂಗದೇವನ. ಬ.ವ.ದೀ. 558

ನಾನು ಹುಟ್ಟಿದ ಗ್ರಾಮ ಸಾಸಲಹಟ್ಟಿ. ನಮ್ಮ ಮನೆಯ ಪಕ್ಕದಲ್ಲಿ ಸ್ವಲ್ಪವೇ ದೂರದಲ್ಲಿ ಒಂದು ಬನ್ನಿಮರ. ಅದಕ್ಕೊಂದು ಕಟ್ಟೆ ಕಟ್ಟಿ ಕಟ್ಟೆಯ ಮೇಲೆ 3 ಕಲ್ಲುಗಳನ್ನು ಆನಿಸಿ ಗೂಡು ಮಾಡಿದ್ದರು. ಅದರೊಳಗೆ ದೀಪವನ್ನು ಹಚ್ಚಿಡಲು ಸಾಧ್ಯವಾಗುತ್ತಿತ್ತು. ಆ ಬನ್ನಿಗಿಡಕ್ಕೆ ಸೀರೆ ಸುತ್ತುವುದು, ಅರಿಷಿಣ ಕುಂಕುಮ ಬಳಿಯುವುದು ನಡೆಯುತ್ತಿತ್ತು. ನಾವೂ ಮಂಗಳವಾರದಂದು ಹೋಗಿ ದೀಪ ಹಚ್ಚಿದ್ದುಂಟು.

ಒಂದು ದಿನ ಬಲಿ ಇತ್ತು. ಆ ಬನ್ನಿ ಗಿಡ ದೇವಿಯ ಸಂಕೇತ ಎಂದು ಅದಕ್ಕೆ ಬಲಿ ಕೊಡಲಾಗುತ್ತಿತ್ತು. ಹರಕೆಯ ಕೋಣದ ಬಲಿಯನ್ನು ಕೊಟ್ಟ ನಂತರ ಕೋಣನ ತಲೆಯನ್ನು ಕಡಿದು ಬನ್ನಿಕಟ್ಟೆಯ ಮುಂದೆ ಇಡಲಾಗಿತ್ತು. ಚಿಕ್ಕ ಹುಡುಗಿ ಇದ್ದಾಗ ನೋಡಿದ ಆ ಭೀಭತ್ಸ ದೃಶ್ಯ ಚಿತ್ತ ಪಟಲದ ಮೇಲೆ ಇನ್ನೂ ಅಚ್ಚಳಿಯದೆ ಉಳಿದಿದೆ.

ಹೀಗೆ ಗಿಡ ಮರಗಳಲ್ಲಿ ದೈವಂಗಳನ್ನು ಕಲ್ಪಿಸಿಕೊಂಡು ಅವಕ್ಕೆ ಕೋಣ, ಕುರಿ, ಕೋಳಿಗಳನ್ನು ಬಲಿಕೊಡುವ ಅಜ್ಞ ಜನರನ್ನು ಕಂಡು ಮರುಕಗೊಂಡು ಧರ್ಮಪಿತರು ಹೇಳುವರು, ಬೆಲೆಬಾಳುವ ಕುರಿಯನ್ನು ಕಡಿದು ಇಟ್ಟೆವೆಂದು ಸಂತೋಷ ಪಡುವರು. ಕುರಿಯ ವಧೆಯಾದಾಗ ಪುಣ್ಯ ನಾಶವಾಗಿ ದೇವರ ಕೋಪಕ್ಕೆ ವ್ಯಕ್ತಿ ಪಾತ್ರನಾಗುವನು. ಆದ್ದರಿಂದ ಕರುಣಾಮಯಿಯಾದ ದೇವನ ಅನುಗ್ರಹಕ್ಕೆ ಪಾತ್ರರಾಗಲು ಕುರಿಯೂ ಬೇಡ, ಮರಿಯೂ ಬೇಡ, ಭಕ್ತಿಯಿಂದೇರಿಸುವ ಪತ್ರೆಯೇ ಸಾಕು. ನಿತ್ಯವೂ ನಿಷ್ಠೆಯಿಂದ ಲಿಂಗಾರ್ಚನೆ ಮಾಡಿದರೆ ದೇವರಿಗೆ ಪ್ರೀತಿಯುಂಟಾಗುವುದು.

561. ಪರದೈವ ಬೇಡ

ಬನ್ನಿರೆ ಅಕ್ಕಗಳು, ಹೋಗಿರೆ ಆಲದ ಮರಕ್ಕೆ
ಕಚ್ಚುವುದೇ ನಿಮ್ಮ ಚಿಪ್ಪಿನ ಹಲ್ಲುಗಳು?
ಬೆಚ್ಚಿಸುವವೆ ನಿಮ್ಮ ಬಚ್ಚಣೆಯ ರೂಹುಗಳು?
ನಮ್ಮ ಲಿಂಗದೇವನಲ್ಲದೆ
ಪರದೈವಂಗಳು ಮನಕ್ಕೆ ಬಂದುವೆ,
ಬಿಕ್ಕನೆ ಬಿರಿವ ದೈವಂಗಳು? ಬ.ವ.ದೀ. 559

ಇಷ್ಟಲಿಂಗ ದೀಕ್ಷೆ ಪಡೆದು ಲಿಂಗಾಂಗಿಗಳಾಗಿ ನೇಮವಂತರಾದಾಗ, ಪೂರ್ವಾಶ್ರಮದಲ್ಲಿ ಆಚರಿಸುತ್ತಿದ್ದ ಪಂಚಭೂತಗಳ ಪೂಜೆ, ಗಿಡ ಬಳ್ಳಿಗಳ ಪೂಜೆ ಮುಂತಾದವು ನಿಷಿದ್ಧ. ಆದರೆ ತಿಳುವಳಿಕೆಯಿಲ್ಲದ ಹೆಂಗೆಳೆಯರು ದೀಕ್ಷಾನಂತರವೂ ಆಚರಣೆಗಳನ್ನು ಯಾಂತ್ರಿಕವಾಗಿ ಮುಂದುವರಿಸುತ್ತಾರೆ. ಆಲದ ಮರವನ್ನು ಸುತ್ತುವುದೂ ಅಂಥ ಆಚರಣೆಯಲ್ಲಿ ಒಂದು. ಅದನ್ನು ಮಾಡಬಾರದು. ಎಂದು ಪ್ರಾಜ್ಞರಾದವರು ಹೇಳಿದರೆ, "ಆಲದ ಗಿಡಗಳಲ್ಲಿ ದೈವಂಗಳು ಇರುತ್ತವೆ. ಹೋಗಿ ಪೂಜಿಸದೆ ಇದ್ದರೆ. ಹಲ್ಲಿನ ಚಿಪ್ಪುಗಳೆರಡೂ ಕೂಡಿಕೊಂಡು ಬಿಡುತ್ತವೆ. ಗಿಡದಲ್ಲಿರಬಹುದಾದ ಕ್ಷುದ್ರ ದೈವಂಗಳು ಬೆದರಿಸಿ, ಬೆಚ್ಚುವಂತೆ ಮಾಡುತ್ತವೆ." ಎಂದು ಊಹಾ ಪೋಹದ ಕಥೆಗಳನ್ನು ಕಟ್ಟಿ ಬಣ್ಣಿಸುತ್ತಾರೆ.

ಒಂದು ಅರ್ಥಪೂರ್ಣ ದೃಷ್ಟಾಂತವಿದೆ. ಒಂದು ಹಳ್ಳಿಯ ಮಧ್ಯದಲ್ಲಿ ಒಂದು ತೋಪು ಇತ್ತು, ಅಲ್ಲಿ ಎತ್ತರವಾಗಿ ದಟ್ಟವಾಗಿ ಬೆಳೆದ ಮರಗಳ ಗುಂಪು ಇತ್ತು, ಆಲದ ಮರವೊಂದು ಇದ್ದು ಅದರಲ್ಲಿ ದೆವ್ವ ಇದೆ ಎಂಬ ಸುದ್ದಿಯು ದಟ್ಟವಾಗಿ ಹಬ್ಬಿತ್ತು, ಅವರು ಅದನ್ನು ಕಂಡರು, ಇವರು ಇದನ್ನು ಕಂಡರು ಎಂದು ದಿನಕ್ಕೊಂದು ಕಥೆ ಹೇಳುತ್ತಿದ್ದರು. (ಕೆಲವೊಮ್ಮೆ ದುರ್ವ್ಯಸನಿಗಳು, ಸಮಾಜ ಘಾತುಕರು ಜನರು ಅತ್ತ ಸುಳಿಯದಂತೆ ಮಾಡಿ ತಮ್ಮ ದುರ್ವ್ಯವಹಾರ ನಡೆಸುತ್ತಿರುತ್ತಾರೆ.) ಒಂದು ದಿನ ತುಂಟ ತರುಣರು ಕುಳಿತು ಹರಟೆ ಹೊಡೆಯುವಾಗ ಆಲದ ಮರದ ಸುದ್ದಿ ಬಂದಿತು. "ಯಾರಾದರೂ ಅಮವಾಸ್ಯೆ ದಿನ ರಾತ್ರಿ ಒಂದು ಗಂಟೆಗೆ ಆ ಮರದ ಬಳಿಗೆ ಹೋಗಿ ಒಂದು ಮೊಳೆ ಹೊಡೆದು ಬಂದರೆ ಅಂಥ ಧೀರನಿಗೆ ಹತ್ತು ಸಾವಿರ ರೂಗಳ ಬಹುಮಾನ ಉಂಟು." ಎಂದು ಒಬ್ಬ ಹೇಳಿದ. ಇನ್ನೊಬ್ಬ ಆ ಸವಾಲು ಸ್ವೀಕರಿಸಿ ಅಮವಾಸ್ಯೆ ದಿವಸ ಹೊರಟ. ಮನದೊಳಗೆ ಪುಕು ಪುಕು ಎನ್ನುತ್ತಿತ್ತು, ಕೈಕಾಲು ನಡುಗುತ್ತಿದ್ದವು. ಹೇಗೋ ಮಾಡಿ ಹೋದ, ಮರದ ಬಳಿಗೆ ಹೋಗಿ ಮೊಳೆ ಹೊಡೆದ. ಬೇಗನೆ ವಾಪಸ್ಸು ತಿರುಗಬೇಕು ಎನ್ನುವಷ್ಟರಲ್ಲಿ ದೆವ್ವ ಷರ್ಟನ್ನು ಹಿಡಿದು ಬಿಟ್ಟಿತ್ತು. ಹೃದಯಾಘಾತದಿಂದ ಸತ್ತ. ಸ್ಪರ್ಧೆ ಏರ್ಪಡಿಸಿದವರು ನುಡಿದರು, "ನಾವು ಹೇಳಿದರೆ ಕೇಳಲಿಲ್ಲ. ದೆವ್ವದ ಶಕ್ತಿ ಸಾಮಾನ್ಯವಲ್ಲ." ಉದ್ಗರಿಸಿದರು. ಮರು ದಿನ ಬೆಳಿಗ್ಗೆ ನೋಡುವಾಗ ಆ ವ್ಯಕ್ತಿ ಗಡಿಬಿಡಿ, ಆತುರ, ಭಯದಿಂದ ತನ್ನ ಅಂಗಿಯನ್ನು ಸೇರಿಸಿ ಮೊಳೆ ಹೊಡೆದುಕೊಂಡಿದ್ದು, ಅದು ವಾಪಸ್ಸು ಬರಲು ಬಿಟ್ಟಿಲ್ಲ, ಯಾವ ದೆವ್ವವೂ ಅಲ್ಲ ಎಂಬುದು ಜನರಿಗೆ ಮನವರಿಕೆಯಾಯಿತು. ಸುಂದರನೂ, ಸದೃಢನೂ, ಗುಣವಂತನೂ, ಅನುರೂಪನು ಆದ ಪತಿ (ಲಿಂಗದೇವ)ಯನ್ನು ಬಿಟ್ಟು ಕುರೂಪಿ ಪರಪುರುಷನಿಗೆ ಎಳಸುವ ಜಾರಿಣಿ ಸ್ತ್ರೀಯಂತೆ, ಲಿಂಗದೇವನಲ್ಲದೆ ಅನ್ಯ ದೈವಂಗಳನ್ನು ಪೂಜಿಸಲು ಹೋಗುವಿರಾ? ಎಂತಹ ದುರ್ದೈವವಿದು!

562.ಕಾಲಿಡಲಿಂಬಿಲ್ಲದಷ್ಟು ದೈವಂಗಳು

ಮಡಿಕೆ ದೈವ ಮೊರ ದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲ ನಾರಿ ದೈವ, ಕಾಣಿರೊ,
ಕೊಳಗ ದೈವ ಗಿಣ್ಣಿಲು ದೈವ ಕಾಣಿರೊ!
ದೈವ ದೈವವೆಂದು ಕಾಲಿಡಲಿಂಬಿಲ್ಲ
ದೇವನೊಬ್ಬನೇ ಲಿಂಗದೇವ. ಬ.ವ.ದೀ. 560

ಗ್ರಾಮೀಣ ಪ್ರದೇಶದಲ್ಲಿ ಅಜ್ಞ ಜನರು ಪೂಜಿಸುವ ವಸ್ತುಗಳಿಗೆ ಲೆಕ್ಕವಿಲ್ಲ ಮಣ್ಣಿನ ಮಡಿಕೆ ದೈವ! ಮಡಿಕೆಗಳನ್ನು ಒಂದರ ಮೇಲೊಂದು ಪೇರಿಸಿ-ಇದಕ್ಕೆ ಅಡಕಲ ಗಡಿಗೆ ಸಾಲು ಎನ್ನುವರು, ದಿನಾಲೂ ಪೂಜಿಸುತ್ತಾರೆ. ಕೇರುವ ಮೊರ ದೈವ, ಬೀದಿಯಲ್ಲಿ ಬಿದ್ದ ಯಾಚೆಕೋಚೆ ಕಲ್ಲು ದೈವ, ಬಾಚಣಿಗೆ, ಬಿಲ್ಲಿನ ಹಗ್ಗ, ಅಳೆಯುವ ಕೊಳಗ, ಚಿಕ್ಕ ಗಾತ್ರದ ಗಿಂಡಿ. ಬೆಳಿಗ್ಗೆ ಎದ್ದು ಎಲ್ಲವಕ್ಕೆ ಪೂಜೆ ಮಾಡುವುದನ್ನು ಕಾಣುತ್ತೇವೆ. ಇನ್ನೂ ಸೇರಿಸಬಹುದಾದ ವಸ್ತುಗಳೆಂದರೆ ಹೊಸ್ತಿಲು, ಒರಳುಕಲ್ಲು, ಒನಕೆ, ಮಜ್ಜಿಗೆ ಕಡೆಯುವ ಕಂಭ. ಇವಕ್ಕೆಲ್ಲ ನೀರು ಚಿಮುಕಿಸಿ,

ವಿಭೂತಿ ಧರಿಸಿ ಒಂದು ಹೂವನ್ನು ಇಟ್ಟು ಪೂಜಿಸುವುದನ್ನು ಕಾಣುತ್ತಿದ್ದೆವು. ಅಡಕಲ ಗಡಿಗೆ ಸಾಲು ಸಂಪತ್ತಿನ ಸಂಕೇತವಾಗಿ ಪೂಜೆಗೊಳ್ಳುತ್ತಿತ್ತು.

ಕೆಲವರು ಸಾಹಿತಿಗಳು ಇದು ಜಾನಪದ ಸಂಸ್ಕೃತಿ. ಇಲ್ಲಿ ವೈವಿಧ್ಯತೆ ಇದೆ. ಏಕದೇವೋಪಾಸನೆಯು ಈ ವೈವಿಧ್ಯತೆಯನ್ನು ನಾಶ ಮಾಡುತ್ತದೆ ಎಂದು ಟೀಕಿಸುವುದುಂಟು. ಪರಮಾತ್ಮನ ಸ್ವರೂಪವನ್ನು ಪ್ರೌಢವಾಗಿ ಅರಿಯುವ ಪ್ರಾಜ್ಞರಾಗದೆ ಅಜ್ಞಾನದಿಂದ ಏನೇನನ್ನೋ ಪೂಜೆ ಮಾಡುವುದು ಅರ್ಥಪೂರ್ಣವೆ? ಅದಕ್ಕಾಗಿ ಗುರು ಬಸವಣ್ಣನವರು ಹೇಳುತ್ತಾರೆ. "ಈ ಎಲ್ಲ ವಸ್ತುಗಳನ್ನು ದೈವ ದೈವ ಎಂದು ಪೂಜಿಸದೆ ಒಬ್ಬನೇ ಆದ ದೇವನನ್ನು ಪೂಜಿಸಬೇಕು." ಎಂದು.

563.ವ್ಯರ್ಥ ಪ್ರಯತ್ನಬೇಡ

ರಿಣ ತಪ್ಪಿದ ಹೆಂಡಿರಲ್ಲಿ, ಗುಣ ತಪ್ಪಿದ ನಂಟರಲ್ಲಿ
ಜೀವವಿಲ್ಲದ ದೇಹದಲ್ಲಿ ಫಲವೇನೋ?
ಆಳ್ದನೊಲ್ಲದ ಆಳಿನಲ್ಲಿ, ಸಿರಿ ತೊಲಗಿದ ಅರಸಿನಲ್ಲಿ;
ವರವಿಲ್ಲದ ದೈವದಲ್ಲಿ ಫಲವೇನೊ?
ಕಳಿದ ಹೂವಿನಲ್ಲಿ ಕಂಪನುಳಿವ ಸೂಳೆಯಲ್ಲಿ ಹೆಂಪ
ಕೊಳಚೆಯ ನೀರಿನಲ್ಲಿ ಗುಣ್ಪನರಸುವಿರಿ ಮರುಳೆ,
ವರಗುರು ವಿಶ್ವಕ್ಕೆಲ್ಲ ಗಿರಿಜಾ ಮನೋವಲ್ಲಭ,
ಪರಮಾತ್ಮಾ ನಮ್ಮ ಕೂಡಲಸಂಗಮದೇವ. ಬ.ವ.ದೀ. 561

ಪತಿ -ಪತ್ನಿಯರ ಸಂಬಂಧದಲ್ಲಿ ಬಿರುಕು ಮೂಡಿ ಮನಸ್ಸು ಕೆಟ್ಟು ದೂರಸರಿದಾಗ ಗಂಡನು ಹೆಂಡತಿಯಿಂದಾಗಲಿ, ಹೆಂಡತಿಯು ಗಂಡನಿಂದಾಗಲಿ ಸಹಾಯ, ಪ್ರೀತಿ ನಿರೀಕ್ಷಿಸಲು ಸಾಧ್ಯವಿಲ್ಲ, ಅದೇ ರೀತಿ ನೆಂಟರ ಮಧ್ಯೆ ಸದ್ಭಾವನೆ ಕರಗಿ ಹೋಗಿದ್ದರೆ ಅವರಿಂದ ಸಂಕಷ್ಟ ಕಾಲದಲ್ಲಿ ಸಹಾಯವನ್ನು ಬಯಸಲು ಆಗದು. ಆಪತ್ತಿಗೆ ಆದವನೇ ನಂಟ ಎಂಬ ಗಾದೆ ಇದೇ ಹಿನ್ನೆಲೆಯಲ್ಲಿ ಹುಟ್ಟಿದೆ. ಜೀವವಿಲ್ಲದ ದೇಹವಾದ ಶವದಿಂದ ಏನು ಪ್ರಯೋಜನ? ಆಳ್ದ ಅಂದರೆ ಮಾಲಿಕನು ತಿರಸ್ಕರಿಸಿದ ಆಳು ಅಂದರೆ ಸೇವಕನಿಂದ, ರಾಜ್ಯದ ಅಧಿಕಾರ, ಸಿರಿ-ಸಂಪತ್ತು, ಅರಮನೆ ವೈಭವ ಕೈ ಬಿಟ್ಟು ಹೋದ ಅರಸನಿಂದ ಏನು ಉಪಯೋಗವಿದೆ? ಅದೇ ರೀತಿ ವರ ಕೊಡಲು ಅಸಮರ್ಥವಾದ ದೈವದ ಪೂಜೆ ಮಾಡಿ ಪ್ರಯೋಜನವೇನು?

ಅಸಮರ್ಥವಾದ ದೈವಗಳು ಯಾವುವು? ಸೃಷ್ಟಿಕರ್ತ ದೇವನೂ ಅಲ್ಲದ ಐತಿಹಾಸಿಕವಾಗಿ ಬದುಕಿ ಬಾಳಿದ ಮಹಾತ್ಮರೂ ಅಲ್ಲದ ಕಾಲ್ಪನಿಕವಾದ ದೈವಂಗಳು. ಅವುಗಳಿಗೆ ವಸ್ತುನಿಷ್ಠ ಅಸ್ತಿತ್ವವೇ ಇರದು. ಅವುಗಳನ್ನು ಪೂಜಿಸುವುದು ಹೇಗೆ ಎಂದರೆ ಬಾಡಿದ, ಒಣಗಿದ ಹೂವಿನಲ್ಲಿ ಸುವಾಸನೆಯನ್ನು, ಉಳಿದ ಸೂಳಿಯಲ್ಲಿ ಹೆಂಪ - ಮುಪ್ಪಾಗಿ ವಿಟರಿಂದ ತಿರಸ್ಕರಿಸಲ್ಪಟ್ಟ ಸೂಳೆಯಲ್ಲಿ ವಿಲಾಸ ವೈಯ್ಯಾರಗಳನ್ನು ನಿರೀಕ್ಷಿಸಿದಂತೆ! ಚರಂಡಿಯಲ್ಲಿ ಹರಿದು ಹೋಗಿ ಕೊಚ್ಚೆಗುಂಡಿಯಲ್ಲಿ ನಿಂತ ನೀರಿನಲ್ಲಿ ಆರೋಗ್ಯಕರವಾದ ಗುಣವನ್ನು ಹುಡುಕಿದಂತೆ.

ನಿಜವಾದ ಗುರು ಯಾರೆಂದರೆ, ವಿಶ್ವಕ್ಕೆಲ್ಲ ಗುರುವಾದ ಗಿರಿಜೆಯ ಪ್ರೀತಿಪಾತ್ರ ಪತಿಯಾದ,

ಪರಮ ಆತ್ಮ ಕೂಡಲ ಸಂಗಮದೇವ. ಬೇಡಿದರೆ ಅವನನ್ನು ಬೇಡಬೇಕು.

ವಿವರಣೆ: ಏಕದೇವೋಪಾಸನೆಗೆ ಮೊದಲು ಗುರು ಬಸವಣ್ಣನವರು ಏಕದೇವತಾ (ಶಿವ) ಉಪಾಸನೆಯಲ್ಲಿದ್ದರು. ಆಗ ಶಿವನೇ ಸರ್ವಶ್ರೇಷ್ಠ ಎಂದು ನಂಬಿದ್ದರು.

564. ಕೂಡಲ ಸಂಗಮದೇವನೊಬ್ಬನೇ ದೈವ

ಲಿಂಗ ಶಿವಾಲಯದ ಮುಂದೆ ಸಿಂಹ ಶೂದ್ರಿಕರಲ್ಲದಿಲ್ಲ,
ನಂದಿಕೇಶ್ವರ ಭೃಂಗಿನಾಟ್ಯ ನಮ್ಮ ಲಿಂಗನ ಮುಂದೆ;
ಇದಕ್ಕೆ ದಿಷ್ಟ ದೀವಿಗೆ ನಮ್ಮ ಲಿಂಗನ ಮುಂದೆ
ಅನ್ಯದೈವವೆಂಬುದು ತೋರಿಯೂ ಕಾಣಬಾರದು,
ನೊಸಲಕಣ್ಣ ಭವನೊಬ್ಬನೆ ದೈವ ಕೂಡಲ ಸಂಗಮದೇವ. ಬ.ವ.ದೀ. 562

ಶಿವ (ಸ್ಥಾವರ) ಲಿಂಗವನ್ನು ಸ್ಥಾಪಿಸಿದ ಗರ್ಭಗುಡಿಯ ಬಾಗಿಲಲ್ಲಿ ಇಬ್ಬರು ವ್ಯಕ್ತಿಗಳನ್ನು ದ್ವಾರಪಾಲಕರನ್ನಾಗಿ ನಿಲ್ಲಿಸಲಾಗಿರುತ್ತದೆ. ಅವರೇ ಸಿಂಹ ಮತ್ತು ಶೂದ್ರಿಕ ಎಂಬ ಇಬ್ಬರು ಶಿವಭಕ್ತರು. ಮುಂಭಾಗದಲ್ಲಿ ನಂದೀಶ್ವರನಿಗೆ ಗೌರವಪೂರ್ಣ ಸ್ಥಾನ. ಗುಡಿಯ ಮುಂದಿನ ರಂಗ ಮಂಟಪದಲ್ಲಿ ಭೃಂಗೀಶ್ವರನ ನಾಟ್ಯದ ವಿವಿಧ ಭಂಗಿಗಳು. ಇದನ್ನೆಲ್ಲ ಎತ್ತಿ ತೋರುವಂತೆ ಲಿಂಗದ ಮೇಲೆ ದೀಪದ ಬೆಳಕು. ಇಷ್ಟು ಬಿಟ್ಟರೆ ಇನ್ನಾವ ದೇವತೆಗಳೂ ಉದಾಹರಣೆಗೆ ಗಣಪತಿ, ಪಾರ್ವತಿ, ನವಗ್ರಹ ಮುಂತಾದವು ಯಾವುವೂ ಇರುವುದಿಲ್ಲ. ಅನ್ಯ ದೈವಗಳನ್ನು ಹುಡುಕಿದರೂ ಸಿಗದು. ತ್ರಿನೇತ್ರನಾದ ಶಿವನು ಒಬ್ಬನೇ ದೈವ, ಉಳಿದವರು ಅವನ ಸೇವಕರು.

565.ತುಡುಗು ನಾಯಿಯ ಬುದ್ಧಿ ಬೇಡ

ಗುಡಿಯೊಳಗಿರ್ದು ಗುಡಿಯ ನೇಣ ಕೊಯಿದಡೆ
ಗುಡಿಯದಡಿ ಬಿದ್ದು ಹಲ್ಲು ಹೋಹುದು ನೋಡಾ!
ಪೊಡವಿಗೀಶ್ವರನ ಗರ್ಭಾಸನದೊಳಗಿರ್ದು ನುಡಿವರು,
ಮತ್ತೊಂದು ದೈವವುಂಟೆಂದು
ತುಡುಗಿ ನಾಯನು ಪಿಡಿತಂದು ಸಾಕಿದಡೆ
ತನ್ನೊಡೆಯಂಗೇ ಬಗುಳುವಂತೆ ಕಾಣಾ,
ಲಿಂಗದೇವ ಬ.ವ.ದೀ. 563

ಕಟ್ಟಿಗೆಯ ತೊಲೆ, ಬಿದಿರಿನಿಂದ ಮಾಡಿದ ಗುಡಿಯೊಳಗೆ ನಿಂತುಕೊಂಡು ಆ ಕಟ್ಟಿಗೆ, ಬಿದಿರಿಗೆ ಹೆಣೆದ ಹಗ್ಗವನ್ನು ಕೊಯಿದು ಹಾಕಿದರೆ ಗುಡಿಯ ದಡಿ (ಕಟ್ಟಿಗೆಗಳು) ಬಿದ್ದು ಹಲ್ಲು ಮುರಿಯುತ್ತೆ, ಪ್ರಾಣಕ್ಕೇ ಅಪಾಯ. ಹಾಗೆ ಪರಮಾತ್ಮನ ಗರ್ಭದೊಳಗೆ ಎಲ್ಲರೂ ಇದ್ದು ಅವನ ಮಹಿಮೆಯನ್ನು ಅರಿಯದೆ ಬೇರೆ ದೈವಗಳು ಇವೆ ಎಂದು ಪೂಜಿಸುವವರು ಕೃತಘ್ನರು, ದೇವ ದ್ರೋಹಿಗಳು. ಒಂದು ತುಡುಗು ನಾಯಿಯನ್ನು (ಒಂದೇ ಕಡೆ ನಿಷ್ಠೆಯಿಂದ ಬೆಳೆಯದೆ ಬೀದಿ ಬೀದಿ ತಿರುಗುವ ನಾಯಿ) ತಂದು ಅನ್ನ ಹಾಕಿ ಸಾಕಿದರೆ ಅದು ಅನ್ನ ಹಾಕಿದವನಿಗೇ ಬೊಗಳುತ್ತದೆ. ಲಿಂಗದೇವನನ್ನು ಅರಿತು ಆರಾಧಿಸದ ಅಜ್ಞಾನಿ ಮಾನವರು ಸಹ ತುಡುಗುಣಿ ನಾಯಿಯಂತೆ ಕೃತಘ್ನರು.

566. ಅಸಮಾಕ್ಷನಿಗೆ ಅನ್ಯದೈವ ಸಮವಲ್ಲ

ಅಸಮಾಕ್ಷ ಲಿಂಗಕ್ಕೆ ಅನ್ಯದೈವ ಸರಿಯೆಂಬವನ ಬಾಯಲ್ಲಿ
ಮಸೆದ ಕೂರಲಗನಿಕ್ಕದೆ ಮಾಣ್ಬನೆ?
ಹುಸಿಯಾಗಿ ನುಡಿವವನ ನಾಯಾಗಿ ಬಗುಳಿಸನೆ?
ಹಿರಿಯರುತ್ತಮರೆನ್ನದವರ ಕುದುರೆಯಾಗಿ ಕಟ್ಟಿಸನೆ?
ಗುರುಲಘುವೆನ್ನದವರ ಬಾಯಲ್ಲಿ ಮೆಟ್ಟ
ಹುಡಿಯ ಹೊಯ್ಯದೆ ಮಾಣ್ಬನೆ?
ಪರಸ್ತ್ರೀಗಳುಪಿದವರ ಗಾಣದಲಿಕ್ಕಿ ಹಿಳಿಯನೆ?
ಪರಧನಕ್ಕಳುಪಿದವರ ಹಿಡಿಖಂಡವ ಕೊಯ್ಯನೆ?
ಎಲೆ ಲಿಂಗದೇವಾ, ನಿಮ್ಮ ಹೇಳಿದ ಹೇಳಿಕೆಯಿಂದ
ಪಿಂಬೆರ ಮೈಲುಗೆ ಮೇಳವಾಡುತ್ತಿದ್ದ ಕಾಣಾ, ತ್ರೈಜಗದೊಳಗೆ.

ಬ.ವ.ದೀ. 564

ಅಸಮಾಕ್ಷ ಎಂದರೆ ಶಿವ. ಅವನಿಗೆ ಮೂರು ಕಣ್ಣುಗಳಾದ ಕಾರಣ ಅವನು ಅಸಮಾಕ್ಷ. ಶಿವನಿಗೆ ಸಮಾನವಾದ ಇನ್ನೊಂದು ದೈವವಿಲ್ಲ. ಇದೆ ಎಂದರೆ ಅವರ ಬಾಯಿಯಲ್ಲಿ ಮಸೆದು ಚೂಪಾದ ಕತ್ತಿಯನ್ನು ದೇವರು ಇಡದೇ ಬಿಡುವನೆ? ಈ ಸುಳ್ಳನ್ನು ಹೇಳುವವನನ್ನು ನಾಯಿಯನ್ನು ಮಾಡಿ ಬಗುಳಿಸದೆ ಇರುವನೆ? ಹಿರಿಯರು, ಉತ್ತಮರು ಆದವರನ್ನು ಗುರುತಿಸಿ ಗೌರವಿಸಲಾರದವರನ್ನು ದೇವರು ಕುದುರೆಯನ್ನಾಗಿ ಮಾಡಿ ಕಟ್ಟಿ ಹಾಕನೆ? ಯಾವುದು ಹಿರಿದು (ಗುರು) ಯಾವುದು ಕಿರಿದು ಎಂಬ ವಿವೇಕ ಜ್ಞಾನ, ತರತಮ ಪ್ರಜ್ಞೆ ಇಲ್ಲದವರ ಬಾಯಿಯಲ್ಲಿ ಪಾದರಕ್ಷೆಯ ಧೂಳನ್ನು ಹಾಕದೆ ಬಿಡುವನೆ? ಪರಸ್ತ್ರೀಯರ ಮೇಲೆ ದೃಷ್ಟಿ ಹಾಕಿದವರು, ಪರಸ್ತ್ರೀ ಸಂಗ ಬಯಸುವವರನ್ನು ಎಣ್ಣೆ ತೆಗೆಯುವ ಗಾಣದಲ್ಲಿ ಹಾಕಿ ಹಿಂಡನೆ? ಪರಧನವನ್ನು ಅಪಹರಿಸ ಬಯಸುವವನನ್ನು ಶಸ್ತ್ರದಿಂದ ಛಿದ್ರಗೊಳಿಸದೆ ಇರುವನೆ? ಲಿಂಗದೇವ, ನಿನ್ನ ವಾಣಿಯು ಅಪಾರ ಶಕ್ತಿಯುಳ್ಳುದು. ನಿಮಗೆ ಅಪಚಾರ ಮಾಡಿದುದರಿಂದ ಪಿಂಬೆರ ಮೈಲುಗೆಯು ಸಾಕಷ್ಟು ಭಂಗ ಪಟ್ಟನಲ್ಲವೆ?

ಶ್ರೀಕೃಷ್ಣನು ದಿನನಿತ್ಯವೂ ಶಿವಲಿಂಗದ ಪೂಜೆಯನ್ನು ನಿಷ್ಠೆಯಿಂದ ಮಾಡುತ್ತಿದ್ದ. ಅವನನ್ನು ಸೇವಕನಾದ ಪೆರೆಯಾಳ್ವನು ದಿನಾಲೂ ಸಾವಿರ ಕಮಲಗಳನ್ನು ಪೂಜೆಗೆ ತರುತ್ತಿದ್ದನು. ಒಮ್ಮೆ ಆಲಸ್ಯದಿಂದ ಹಿಂದಿನ ದಿನವೇ ತಂದ ಹೂಗಳನ್ನು ಪೂಜೆಗೆ ಒದಗಿಸಿದನು. ಇದನ್ನರಿತು ಸಿಟ್ಟಿಗೆದ್ದ ಕೃಷ್ಣನು "ಗೋಪಿಯರ ಮೈಲಿಗೆ ಬಟ್ಟೆಯಲ್ಲಿ ಹುಟ್ಟು" ಎಂದು ಶಪಿಸಿದನು. ಅದರಂತೆ ಪೆರೆಯಾಳ್ವನು ಪೆಂಬೇರ ಗ್ರಾಮದಲ್ಲಿ ಹುಟ್ಟಿ ಮೈಲಾರನೆನಿಸಿದನು. ಮಾಳಿ ಎಂಬುವವಳನ್ನು ಮದುವೆಯಾದನು. ಅವನು ಸ್ಥಾಪಿಸಿ ಪೂಜಿಸಿದ ಲಿಂಗವೇ ಮೈಲಾರಲಿಂಗ. ಮೈಲಾರನು ಲಿಂಗ ಮುಂದೆ ನಾಯಿಯಂತೆ ಬೊಗಳುತ್ತ ಆಡುತ್ತಿದ್ದನಂತೆ. ಸಣಬಿನಿಂದ ಗೊಂಬೆಯನ್ನು ಮಾಡಿ ಮೇಲೆ ಅರಲನ್ನು ಮೆತ್ತಿ ಮೈಲಾರನ ಮೂರ್ತಿಯನ್ನು ಸಿದ್ಧಪಡಿಸಿ, ಬಣ್ಣ ಬಳಿಯುತ್ತಾರೆ.

(ಮೈಲಾರನ ಪೂಜಿಸಿ ನಾಯಾಗಿ ಬೊಗಳುವುದ ಕಂಡೆ -ಬ.ವ.ದೀ-567
ಒಳ್ಳಿಹ ಮೈಲಾರನ ಒಳಗೆಲ್ಲ ಸಣಬು - ಬ.ವ.ದೀ.282)

ಕೃಷ್ಣನ ಸೇವಕನಾದ ಪೆರೆಯಾಳ್ವನು ಹೂವು ಕೊಡುವುದರಲ್ಲಿ ತಪ್ಪು ಮಾಡಿದ್ದರಿಂದ ಬಹುಶಃ ಗೋಪಿಕಾ ಸ್ತ್ರೀಯರ ಮೈಲಿಗೆ ಬಟ್ಟೆ ತೊಳೆಯುವ ಶಿಕ್ಷೆಯನ್ನು ಶ್ರೀಕೃಷ್ಣ ಕೊಟ್ಟಿರಬಹುದು.

567. ಶಿವ ಮತ್ತು ವಿಷ್ಣು ಸರಿಸಮವಲ್ಲ.

ಶಿವಮಯ ವಿಷ್ಣುವಲ್ಲ, ವಿಷ್ಣುಮಯ ಶಿವನಲ್ಲ ನುಡಿಯದಿರಿಂ ಭೊ!
ನಾರಾಯಣ ಹರನಲ್ಲ ನುಡಿಯದಿರಿಂ ಭೊ!
ಶಿವನು ವಿಷ್ಣುವಲ್ಲ ವಿಷ್ಣು ಶಿವನಲ್ಲ ನುಡಿಯದಿರಿಂ ಭೊ!
ನಮ್ಮ ಕೂಡಲ ಸಂಗಯ್ಯನನರಿಯದ ಸೂನೆಗಾರರೆಲ್ಲ
ನುಡಿಯದಿರಿಂ ಭೊ! ಬ.ವ.ದೀ. 565

ಶಿವ ಭಕ್ತರು ಮತ್ತು ವಿಷ್ಣು ಭಕ್ತರಲ್ಲಿ ಸಾಮರಸ್ಯವಿರಲೆಂದು ಉಭಯತರೂ ಒಂದೆ, ಸರಿಸಮ; ಭೇದ ಮಾಡಬಾರದು ಎಂದು ಹೇಳುವುದುಂಟು. ಇದು ಗುರು ಬಸವಣ್ಣನವರಿಗೆ ಇಷ್ಟವಾಗದು. ಶಿವನಲ್ಲಿ ವಿಷ್ಣು ಉಂಟು. ವಿಷ್ಣುವಿನಲ್ಲಿ ಶಿವನುಂಟು ಎಂದು ಹೇಳದಿರಿ. ಎಂದು ತಾಕೀತು ಮಾಡುತ್ತಾರೆ ಕೂಡಲ ಸಂಗಯ್ಯನ ಸ್ವರೂಪವನ್ನು ಅರಿಯದೆ ಮಾತನಾಡುವವರು ಕೊಲೆಗಾರರು, ಕಟುಕರು ಎಂದು ಕೋಪದಿಂದ ನುಡಿಯುತ್ತಾರೆ.

ವಿಷ್ಣುವು ತನ್ನ ಪತ್ನಿ ಲಕ್ಷ್ಮಿಯನ್ನು ಕಾಲಿನ ಬಳಿ ಕೂರಿಸಿಕೊಳ್ಳುತ್ತಾನೆ, ಶಿವನು ತನ್ನ ಪತ್ನಿ ಪಾರ್ವತಿಯನ್ನು ಪಾದ ಸೇವಕಿಯನ್ನಾಗಿ ಭಾವಿಸದೆ ಅರ್ಧಾಂಗಿನಿಯನ್ನಾಗಿ ಭಾವಿಸಿ ತೊಡೆಯ ಮೇಲೆ ಕೂರಿಸಿಕೊಂಡಿರುತ್ತಾನೆ. ಕೃಷ್ಣನು ಹಲವಾರು ಪತ್ನಿಯರನ್ನು ಹೊಂದಿರುತ್ತಾನೆ, ಗೋಪಿಕೆಯರೊಡನೆ ಸಲ್ಲಾಪ ಮಾಡುತ್ತಾನೆ. ಶಿವನಲ್ಲಿ ಅಂಥ ಚಂಚಲತೆ ಕಾಣುವುದಿಲ್ಲ. ಆತ ಭೋಗಿಯಲ್ಲ ಯೋಗಿ, ಸಂಯಮಿ. ಕೃಷ್ಣನು ಸದಾ ಸಂಹಾರ ನಿರತನಾಗಿರುತ್ತಾನೆ. ಶಿವನು ಭಕ್ತರಕ್ಷಕನಾಗಿರುತ್ತಾನೆ. ಆದ್ದರಿಂದ ಉಭಯತರನ್ನೂ ಹೋಲಿಸಬಾರದು.

568. ಶರಣ ದೂಷಣೆ ಬೇಡ

ಅವಲಕ್ಷಣ ನಾಯ ನುಡಿಯ ನಾಲಿಗೆಯ ಸಡಗರ
ಡೊವಿಗೆ ಮೃತ್ಯುವಿನ ನುಡಿಯೊಳಗಾಯಿತ್ತು.
ಬೇಡವೊ ಪರವಾದಿ ಗಳಹದಿರು.
ಬೇಡವೊ, ದೂಷಕ ಬಗುಳದಿರು!
ಭಕ್ತಿಗೆಯೂ ಬೇಟಕ್ಕೆಯೂ ಜಾತಿ ಸೂತಕವುಂಟೆ?
ಪರುಷ ಮುಟ್ಟಲು ಕಬ್ಬುನ ಹೊನ್ನಾಯಿತ್ತು ಕಾಣಾ.
ನಮ್ಮ ಲಿಂಗದೇವನ ಶರಣರನವರಿವರೆಂದಡೆ
ಕುಂಭಿಪಾತಕ ನಾಯಕ ನರಕ ತಪ್ಪದು ಕಾಣಾ. ಬ.ವ.ದೀ. 568

ಈ ವಚನದಲ್ಲಿ ದೀಕ್ಷಾವಂತರಾದ ಶರಣರನ್ನು ನಿಂದಿಸುವವರನ್ನು, ದೀಕ್ಷಾನಂತರವೂ

ಅವರ ಪೂರ್ವದ ಜಾತಿಯನ್ನು ಎತ್ತಿ ಆಡುವವರನ್ನು ಅತ್ಯಂತ ಕಟುವಾದ ಮಾತುಗಳಲ್ಲಿ ಗುರು ಬಸವಣ್ಣನವರು ಟೀಕಿಸುತ್ತಾರೆ. ಶಾಂತ ಮೂರ್ತಿ ಬಸವಣ್ಣನವರಿಗೂ ಇಷ್ಟು ಕೋಪ ಬರುತ್ತಿತ್ತೆ? ಇದು ವೈಯಕ್ತಿಕ ದೌರ್ಬಲ್ಯವಾದ ಕೋಪವಲ್ಲ ಜಾತಿವಾದಿಗಳ ವಿರುದ್ಧ ತಲೆ ಎತ್ತುವ ಆಕ್ರೋಶ.

ಕೆಲವರ ನಾಲಿಗೆ ಅವಲಕ್ಷಣದ ನಾಲಿಗೆ. ಅಲ್ಲಿ ಒಳ್ಳೆಯ ಮಾತುಗಳು ಬರುವುದೇ ಇಲ್ಲ. ಅವರದು ನಾಯಿ ವಿವೇಚನಾ ರಹಿತವಾಗಿ ಬೊಗುಳುವಂತಹ ಮಾತಿನ ಶೈಲಿ. ಅವರ ನಾಲಿಗೆಯ ಸಡಗರ ಅಸ್ಥಿಪಂಜರದ ತಲೆ ಬುರುಡೆ (ಡೊವಿಗೆ) ಗಾಳಿಗೆ ಸದ್ದು ಮಾಡುವಂತೆ! ಶರಣರ (ಜಾತ್ಯತೀತ) ವಿಚಾರದಿಂದ ಭಿನ್ನವಾಗಿರುವ ಪರ (ಜಾತಿ)ವಾದಿ ಅನವಶ್ಯಕವಾಗಿ ಬೊಗುಳದಿರು. ಎಲೈ ದೂಷಕ ವಿವೇಚನಾರಹಿತವಾಗಿ ಮಾತನಾಡದಿರು. ಭಕ್ತಿ ಮಾಡಲು, ಪರಸ್ಪರ ಪ್ರೀತಿಸಲು ಜಾತಿಯು ಅಡ್ಡಬರದು. ಯಾರು ಬೇಕಾದರೂ ದೀಕ್ಷಾವಂತರಾಗಬಹುದು. ಪರುಷ ಮುಟ್ಟಿದ ತಕ್ಷಣ ಕಬ್ಬಿಣವು ಹೊನ್ನಾಗುವುದು. ಹಾಗೆ ಯಾವ ಜಾತಿಯವರಾದರೇನು ಗುರುವಿನಿಂದ ಮಂತ್ರೋಪದೇಶ ಪಡೆದು ಚಿತ್ಕಳಾಭರಿತವಾದ ಇಷ್ಟಲಿಂಗವನ್ನು ಪಡೆಯುತ್ತಿದ್ದಂತೆಯೇ ಅವನ ಪೂರ್ವದ ಜಾತಿಯಳಿದು ಶರಣನಾಗುವನು. ಆದ್ದರಿಂದ ಸೃಷ್ಟಿಕರ್ತ ಲಿಂಗದೇವನಿಗೆ ಶರಣಾದ ಶರಣರನ್ನು ಅವರಿವರೆಂದು ಜರಿದಡೆ ಭಯಂಕರವಾದ ಕುಂಭಿಪಾತಕ ನಾಯಕ ನರಕ ಪ್ರಾಪ್ತಿಯಾಗದಿರದು.

ಎಲ್ಲ ಕಸುಬಿನ ಎಲ್ಲ ಜಾತಿಯ ಜನರಿಗೆ ಧರ್ಮದ ಹೆಬ್ಬಾಗಿಲನ್ನು ದೀಕ್ಷೆಯ ಮುಖಾಂತರ ತೆರೆದ ಗುರು ಬಸವಣ್ಣನವರಿಗೆ ಶರಣರ ಪೂರ್ವದ ಜಾತಿಗಳನ್ನು ಎತ್ತಿ ಆಡಿ ದೂಷಿಸಿದರೆ ಎಷ್ಟು ಕೋಪ ಬರುತ್ತಿತ್ತು ಎಂಬುದು ಈ ವಚನದಲ್ಲಿ ಅಭಿವ್ಯಕ್ತವಾಗಿದೆ.

569. ದೇವಭಕ್ತರಾಗಬೇಕು

ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದು ಕಂಡೆ,
ಜಿನನ ಪೂಜಿಸಿ ಬತ್ತಲೆಯಿಪ್ಪುದ ಕಂಡೆ,
ಮೈಲಾರನ ಪೂಜಿಸಿ ನಾಯಾಗಿ ಬಗಳುವುದ ಕಂಡೆ,
ನಮ್ಮ ಲಿಂಗದೇವರ ಪೂಜಿಸಿ
ದೇವಭಕ್ತರೆನಿಸಿಕೊಂಬುದ ಕಂಡೆ. ಬ.ವ.ದೀ. 567

ವಿಷ್ಣುವನ್ನು ಪೂಜಿಸಿ ಭುಜ(ಮುಡುಹು)ದ ಮೇಲೆ ತಪ್ತಮುದ್ರೆ ಹಾಕಿಸಿಕೊಳ್ಳುವವರನ್ನು ಕಾಣಬಹುದು. ಜಿನ ಮುನಿಗಳಾಗಿ ತೀರ್ಥಂಕರರನ್ನು ಪೂಜಿಸಿ ಬತ್ತಲೆ ಗೊಳ್ಳುವವರನ್ನು ಕಾಣಬಹುದು. ಮೈಲಾರನ ಪೂಜಿಸಿ ನಾಯಿಯಂತೆ ಬೊಗುಳುತ್ತ (ನೆಲದ ಮೇಲೆ ಎಡೆ ಹಾಕಿದ ಅನ್ನವನ್ನು ತಿನ್ನುವವರನ್ನು)ಇರುವವರನ್ನು ಕಾಣಬಹುದು. ಆದರೆ ನಮ್ಮ ಶರಣರು ಹಾಗಲ್ಲ. ಸೃಷ್ಟಿಕರ್ತನಾದ ಲಿಂಗದೇವನನ್ನು ಪೂಜಿಸಿ ಅವರು ದೇವಭಕ್ತರಾಗಿ, ಸಾತ್ವಿಕ ಮತ್ತು ಅರ್ಥಪೂರ್ಣ ಆಚರಣೆ ಅಳವಡಿಸಿಕೊಳ್ಳುವರು.

570. ಬ್ರಾಹ್ಮಣನನ್ನು ನಂಬಿದ್ದಕ್ಕೆ ವಂಚನೆ

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ

ಗೌತಮಮುನಿಗೆ ಗೋವಧೆಯಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಬಲಿಗೆ ಬಂಧನವಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಕರ್ಣನ ಕವಚ ಹೋಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಪರಶುರಾಮ ಸಮುದ್ರಕ್ಕೆ ಗುರಿಯಾದ.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ನಾಗಾರ್ಜುನನ ತಲೆ ಹೋಯಿತ್ತು.
ದೇವ ಭಕ್ತರೆಂದು ನಂಬಿದ ಕಾರಣ
ನಮ್ಮ ಕೂಡಲ ಸಂಗನ ಶರಣರು ಕೈಲಾಸವಾಸಿಗಳಾದರು. -ಬ.ವ.ದೀ. 568

ನಮ್ಮ ದೇಶದಲ್ಲಿ ಅನೇಕ ಮೂಢನಂಬಿಕೆಗಳಿವೆ. ಅವುಗಳಲ್ಲಿ ಒಂದು ಬ್ರಾಹ್ಮಣರು, ಸನ್ಯಾಸಿಗಳು, ಜಂಗಮರು ಮುಂತಾದವರನ್ನು ನೋಯಿಸಬಾರದು, ಅವರಿಗೆ ಎದುರಾಡಬಾರದು. ಅವರು ಶಾಪ ಕೊಟ್ಟು ಬಿಡುತ್ತಾರೆ. ವೈದಿಕ-ಹಿಂದು ಧರ್ಮದ ಪುರಾಣಗಳಂತೂ ಶಾಪದ ಕಥೆಗಳೇ ಆಗಿವೆ. ಶಾಪವನ್ನು ಹೊಂದಿದವರು ನಾನಾ ಬಗೆಯ ಸಂಕಷ್ಟಕ್ಕೆ ಗುರಿಯಾಗುವ ಕಥೆಗಳನ್ನು ಓದಿ ಜನರು ಭಯಗ್ರಸ್ತರಾಗುತ್ತಾರೆ.

ಗೌತಮನು ಓರ್ವ ತಪಸ್ವಿ. ಅವನು ಬಿತ್ತಿದುದು ಬೆಳೆಯಲೇ ಬೇಕು ಎಂಬ ವರವನ್ನು ಶಿವನಿಂದ ಪಡೆದಿದ್ದ. ಒಮ್ಮೆ 12 ವರ್ಷ ತೀವ್ರವಾದ ಬರಗಾಲ ಬಂದಿತು. ಗೌತಮನ ಆಶ್ರಮದಲ್ಲಿ ಮಾತ್ರ ಸಮೃದ್ಧಿ ಇತ್ತು. ಕ್ಷಾಮ ಪೀಡಿತರಾದ ಋಷಿಗಳು, ಜನರು ಅವನ ಆಶ್ರಮದಲ್ಲಿ ಆಶ್ರಯ ಪಡೆದಿದ್ದರು. ಅವನ ಸಮೃದ್ಧಿ ನೋಡಿ ಅಸೂಯಾಪರನಾದ ದಾರುಕ ಎಂಬ ಬ್ರಾಹ್ಮಣನು ಸೊರಗಿ ಸಾಯಲಾದ ಹಸುವೊಂದನ್ನು ಗದ್ದೆಯಲ್ಲಿ ನುಗ್ಗಿಸಿದ. ಗೌತಮನು ಒಂದು ಸಣ್ಣ ಕಲ್ಲನ್ನು ಅದನ್ನು ಓಡಿಸಲು ಎಸೆದಾಗ ಅದು ಬಿದ್ದು ಸತ್ತು ಹೋಯಿತು. ಗೌತಮನಿಗೆ ಗೋಹತ್ಯಾ ದೋಷ ಎರಗಿತೆಂದು ಅಲ್ಲಿದ್ದ ಋಷಿಗಳೆಲ್ಲರೂ ಬಿಟ್ಟು ಹೋದರು. ಗೌತಮನು ಶಿವನನ್ನು ಕುರಿತು ತಪಸ್ಸು ಮಾಡಿ ಗೋಹತ್ಯಾ ದೋಷವನ್ನು ಪರಿಹರಿಸಿಕೊಂಡನು.

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ ಬಲಿಗೆ ಬಂಧನವಾಯಿತು. ಮಹಾಬಲಿಪುರಂ ಅನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬಲಿ ಚಕ್ರವರ್ತಿ ಆಳುತ್ತಿದ್ದ. ಅವನ ರಾಜ್ಯ ಸಮೃದ್ಧವಾಗಿತ್ತು. ಪ್ರಜೆಗಳು ಬಹಳ ಸುಖವಾಗಿದ್ದರು. ವಿಷ್ಣುವು ವಾಮನನೆಂಬ ಬ್ರಾಹ್ಮಣನ ರೂಪವನ್ನು ತಾಳಿ ಭಿಕ್ಷೆಗಾಗಿ ಬಂದ. ಭಾವುಕ ಭಕ್ತನಾದ ಬಲಿ ಚಕ್ರವರ್ತಿ ಯಾರು ಏನು ಕೇಳಿದರೂ ಕೊಟ್ಟು ಬಿಡುವೆ ಎಂಬ ಪ್ರತಿಜ್ಞೆ ಕೈಗೊಂಡಿದ್ದ. ವಾಮನ 3 ಹೆಜ್ಜೆ ಭೂಮಿ ಕೇಳಿದಾಗ ಬಲಿ ಚಕ್ರವರ್ತಿ ಕೊಡಲೊಪ್ಪಿದ. ಅಸುರರ ಗುರು ಶುಕ್ರಾಚಾರ್ಯನು ಬೇಡ ಎಂದು ಬಲಿಯನ್ನು ತಡೆದ. ವಾಮನನು ವಂಚಿಸಲು ಬಂದಿದ್ದಾನೆಂದು ಎಚ್ಚರಿಕೆ ನೀಡಿದ. ಆದರೆ ಬಲಿಯು ಬ್ರಾಹ್ಮಣನನ್ನು

ನೋಯಿಸಬಾರದೆಂದು, ತಮ್ಮ ಪ್ರತಿಜ್ಞೆಗೆ ಚ್ಯುತಿ ಬರಬಾರದೆಂದು ದಾನ ಕೊಡಲು ಮುಂದಾದನು. ಆಗ ವಾಮನನ್ನು ಇಡೀ ರಾಜ್ಯವನ್ನು ಆಕ್ರಮಿಸಿಕೊಂಡು ಬಲಿಯನ್ನು ಪಾತಾಳ (ಬಂಧನ)ಕ್ಕೆ ತಳ್ಳಿದನು.

ಪಾಂಡವರ ಪಕ್ಷಪಾತಿಯಾಗಿದ್ದ ಶ್ರೀ ಕೃಷ್ಣನು ಬ್ರಾಹ್ಮಣ ವೇಷ ಧರಿಸಿ ಕರ್ಣನ ಬಳಿಗೆ ಬಂದ. ಕರ್ಣನಾದರೂ ಅಷ್ಟೇ ಕೇಳಿದವರಿಗೆ ಕೇಳಿದ್ದನ್ನು ಕೊಡುತ್ತೇನೆಂದು ಪ್ರತಿಜ್ಞೆ ಮಾಡಿದ್ದ. ಬ್ರಾಹ್ಮಣನು ಕರ್ಣನ ಕವಚವನ್ನು ಕೇಳಿದಾಗ ಕೊಟ್ಟುಬಿಟ್ಟು ದುರ್ಬಲನಾದ. ದಾನ ಮಾಡುವಾಗ ಪಡೆಯುವವನ ಉದ್ದೇಶ ತಿಳಿದುಕೊಂಡಿರಬೇಕು ಮತ್ತು ತನ್ನ ದಾನ ಸತ್ಪಾತ್ರವೆ, ಅಪಾತ್ರವೇ ಎಂಬ ವಿವೇಚನೆ ದಾನಿಗಳಲ್ಲಿ ಇರಬೇಕು.

ದಕ್ಷಬ್ರಹ್ಮನ ಮಗಳಾದ ದಾಕ್ಷಾಯಿಣಿ ಶಿವನನ್ನು ಮದುವೆಯಾಗಲು ಇಷ್ಟಪಟ್ಟಳು. ದಕ್ಷಬ್ರಹ್ಮ ಶಿವನಿಗೆ ಮಗಳನ್ನು ಧಾರೆ ಎರೆದುಕೊಟ್ಟ. ಶಿವನ ಕೃಪೆಯಿಂದ ಸಕಲ ಸೌಭಾಗ್ಯವನ್ನು, ಸ್ಥಾನ ಮಾನವನ್ನೂ ಪಡೆದ. ಒಮ್ಮೆ ಕೈಲಾಸಪತಿಯ ದರ್ಶನಕ್ಕೆ ಹೋದಾಗ ದ್ವಾರಪಾಲಕನಾಗಿದ್ದ ನಂದೀಶ್ವರನು ಒಮ್ಮೆಗೇ ಒಳಗೆ ಬಿಡಲಿಲ್ಲ. ಇದರಿಂದ ಅವಮಾನವಾಯಿತೆಂದು ಭಾವಿಸಿದ ದಕ್ಷಬ್ರಹ್ಮ ಮರಳಿ ಹೋದ. ಬ್ರಾಹ್ಮಣರ ಸಲಹೆಯಂತೆ ಶಿವನ ತತ್ವಕ್ಕೆ ವಿರುದ್ಧವಾದ ಯಜ್ಞವನ್ನು ಮಾಡಲು ನಿಶ್ಚೈಸಿ ಹರಿಬ್ರಹ್ಮರನ್ನು ಇತರ ದೇವತೆಗಳನ್ನು ಆಹ್ವಾನಿಸಿದ. ಶಿವನನ್ನಾಗಲೀ, ದಾಕ್ಷಾಯಣಿಯನ್ನಾಗಲಿ ಆಹ್ವಾನಿಸಲಿಲ್ಲ. ಜನರೆಲ್ಲ ತಂಡೋಪತಂಡವಾಗಿ ಯಜ್ಞಕ್ಕೆ ಧಾವಿಸುತ್ತಿದ್ದರು. ನೋಡಿ ದುಃಖಿತಳಾದ ದಾಕ್ಷಾಯಣಿ ತಾನು ಹೋಗಲು ಪತಿಯ ಅನುಮತಿ ಬೇಡಿದಳು. ಆಹ್ವಾನವಿಲ್ಲದೆ ಹೋಗಬಾರದೆಂದು ಶಿವನು ಹೇಳಿದರೂ ತನ್ನ ತಂದೆಯ ಮನೆಗೆ ಹೋಗಲು ಆಹ್ವಾನವೇಕೆ ಬೇಕು ಎಂದು ಪರಿವಾರ ಸಹಿತವಾಗಿ ಹೋದಳು. ದಕ್ಷಬ್ರಹ್ಮ ಮಗಳಿಗೆ ಸರಿಯಾಗಿ ಸ್ವಾಗತ ನೀಡಲಿಲ್ಲ; ಮಾತ್ರವಲ್ಲ ಶಿವನನ್ನು ಪರಿಪರಿಯಾಗಿ ನಿಂದಿಸಿದನು. ಇದರಿಂದ ಅವಮಾನಿತಳಾಗಿ ನೊಂದ ದಾಕ್ಷಾಯಿಣಿ ಯಜ್ಞಕುಂಡದಲ್ಲಿ ಧುಮುಕಿದಳು. ದಾಕ್ಷಾಯಣಿಯೊಡನೆ ಬಂದಿದ್ದ ಶಿವ ಸೇವಕರು ವಾಪಸ್ಸು ಹೋಗಿ ನಡೆದ ಘಟನೆಯನ್ನು ವಿವರಿಸಿದಾಗ ಕೋಪಾವಿಷ್ಟನಾದ ಶಿವನು ತನ್ನ ಸೇನಾಪಡೆಯ ಮುಖ್ಯಸ್ಥನಾದ ವೀರಭದ್ರನನ್ನು ಕಳಿಸಿದನು. ವೀರಭದ್ರನು ಆವೇಶದಿಂದ ಬಂದು ಯಜ್ಞವನ್ನು ಕೆಡಿಸಿ ದಕ್ಷಬ್ರಹ್ಮನ ತಲೆಯನ್ನು ಕತ್ತರಿಸಿದನು. ಗಂಡನ ಸಾವಿನಿಂದ ಹೌಹಾರಿದ ದಕ್ಷಬ್ರಹ್ಮನ ಪತ್ನಿಯು ಶಿವನನ್ನು ಪ್ರಾರ್ಥಿಸಿದಾಗ ಶಿವನು ಕರುಣೆಯಿಂದ (ಸದಾತಲೆ ಬಗ್ಗಿಸಿ, ವಿಧೇಯತೆಯಿಂದ ಇರುವ) ಕುರಿಯ ತಲೆಯನ್ನು ದಕ್ಷಬ್ರಹ್ಮನ ದೇಹಕ್ಕೆ ಅಂಟಿಸಿ, ಕುರಿದಲೆಯವನನ್ನಾಗಿ ಮಾಡಿದನು.

ಈ ಕಥೆಯು ಬಹುಮುಖಿ ಸಂದೇಸವನ್ನು ಕೊಡುತ್ತದೆ. ಆಹ್ವಾನವಿಲ್ಲದೆ ಸುಖದ ಸಮಾರಂಭಗಳಿಗೆ ಹೋಗಬಾರದು. ಬ್ರಾಹ್ಮಣರ ಮಾತು ಕೇಳಿ ಶಿವನ ತತ್ವಗಳಿಗೆ ವಿರುದ್ಧವಾಗಿ (ಇಂದಿನ ಅನೇಕ ಲಿಂಗಾಯತ ಮಠಾಧಿಪತಿಗಳು ಹೋಮ ಹವನ, ಯಜ್ಞ-ಯಾಗ ಮಾಡುವಂತೆ) ದಕ್ಷಬ್ರಹ್ಮನು ಯಜ್ಞವನ್ನು ಮಾಡಿದ್ದಕ್ಕಾಗಿ ಶಿಕ್ಷಿಸಲ್ಪಟ್ಟ. ನಂತರ ಸದಾ ತಲೆ ತಗ್ಗಿಸಿ ನಡೆಯುವ ಕುರಿಯಂತೆ ವಿನೀತನಾದ. ಬ್ರಾಹ್ಮಣರ ಮಾತು ಕೇಳಿ ತನ್ನದಲ್ಲದ ಧಾರ್ಮಿಕ ಆಚರಣೆ ಮಾಡಿದ್ದರಿಂದ ಕುರಿತಲೆಯವನಾಗುವ ಸನ್ನಿವೇಶ ಒದಗಿತು. ಪರಶುರಾಮನಿಗೆ ಆ ಹೆಸರು ಬರಲು

ಕಾರಣವೇನೆಂದರೆ ಅವನು ಶಿವನಿಂದ ವರವಾಗಿ ಕೊಡಲಿ (ಪರಶು) ಯೊಂದನ್ನು ಪಡೆದು ಸದಾ ಅದನ್ನು ಹಿಡಿದುಕೊಂಡು ತಿರುಗುತ್ತಿದ್ದ. ಆತನ ತಂದೆ ಜಮದಗ್ನಿ, ತಾಯಿ ರೇಣುಕಾ. ಕ್ಷುಲ್ಲಕ ಕಾರಣಕ್ಕೆ ರೇಣುಕೆಯ ಪಾವಿತ್ರ್ಯ ಕೆಟ್ಟು ಹೋಯಿತೆಂದು ಕ್ರುದ್ಧನಾದ ಜಮದಗ್ನಿ ರೇಣುಕೆಯನ್ನು ಕೊಲ್ಲಬೇಕೆಂದು ಆಜ್ಞೆ ಮಾಡಿದಾಗ ಪರಶುರಾಮ ತಾಯಿಯ ತಲೆಯನ್ನು ಕತ್ತರಿಸಿದ ಬಳಿಕ ತಂದೆಯನ್ನು ಬೇಡಿಕೊಂಡು ತಾಯಿಯ ಪ್ರಾಣವನ್ನು ಮರಳಿ ಪಡೆದ. ಕಾರ್ತವೀರ್ಯನೆಂಬ ರಾಜನು ಜಮದಗ್ನಿಯನ್ನು ಕೊಂದು ಅವನಲ್ಲಿದ್ದ ಕಾಮಧೇನುವನ್ನು ಅಪಹರಿಸಿದನು. ಪರಶುರಾಮನು ಬ್ರಾಹ್ಮಣನಾದರೂ ಕಾರ್ತವೀರ್ಯನನ್ನು ಕೊಂದುದಲ್ಲದೆ ಕ್ಷತ್ರಿಯರನ್ನೆಲ್ಲ ಕೊಲ್ಲಲು ಸಂಕಲ್ಪತಾಳಿದನು. ಎಲ್ಲೆಡೆ ತಿರುಗಿ ಕ್ಷತ್ರಿಯ ರಾಜರನ್ನು ಕೊಲ್ಲುತ್ತಿದ್ದ. ಕೊನೆಗೆ ಈ ಎಲ್ಲ ಪಾಪಗಳ ನಿವಾರಣೆಗಾಗಿ ಏನು ಮಾಡಬೇಕೆಂದು ಸಲಹೆ ಕೇಳಿದಾಗ ಪುರೋಹಿತರು ಸಮುದ್ರ ಸ್ನಾನ ಸೂಚಿಸಿರಬಹುದು. ಪರಶುರಾಮ ಸಮುದ್ರದಲ್ಲಿ ಮುಳುಗಿ ಹೋಗಿರಬಹುದು.

ನಾಗಾರ್ಜುನನು ಮತ್ಸೇಂದ್ರನೆಂಬ ಗುರುವಿನ ಶಿಷ್ಯ. ಇವನು ರಸವಿದ್ಯೆಯ ಪ್ರಯೋಗದಲ್ಲಿದ್ದನು. ಶ್ರೀಶೈಲ ಪರ್ವತವನ್ನು ಬಂಗಾರವನ್ನಾಗಿ ಮಾಡುವುದಕ್ಕಾಗಿ ಸಿದ್ಧ ಮೂಲಿಕೆಯ ಗುಳಿಗೆಯನ್ನು ಬಾಯಲ್ಲಿ ಇಟ್ಟುಕೊಂಡು ಊದುತ್ತಿದ್ದನು. ಬೆಟ್ಟವೇ ಹೊನ್ನಾದರೆ ಜನರು ಬಂಗಾರಕ್ಕಾಗಿ ಬಡಿದಾಡಿ ಸಾಯುವರೆಂದು ಬಗೆದು ವಿಷ್ಣುವು ನಾಗಾರ್ಜುನನನ್ನು ಕೊಲ್ಲುವುದಕ್ಕೆ ಯೋಜನೆ ರೂಪಿಸಿದನು. ವಿಷ್ಣುವು ಬ್ರಾಹ್ಮಣ ವೇಷದಿಂದ ಬಂದು "ಏನು ಮಾಡುತ್ತಿದ್ದೀಯೆ?" ಎಂದು ಕೇಳಿದನು. "ನನ್ನ ಉಸಾಬರಿ ನಿನಗೆ ಏಕೆ? ಸುಮ್ಮನೆ ಹೋಗು" ಎಂದು ನಾಗಾರ್ಜುನ ನುಡಿದಾಗ ಬ್ರಾಹ್ಮಣನು, "ನಿನ್ನ ಬಾಯಿಯಲ್ಲಿ ಇರುವುದು ಏನು? ತೆಗೆದು ತೋರಿಸಿದರೆ ನಾನು ಹೋಗಿ ಬಿಡುವೆ" ಎಂದನು. ಅವನು ಅದನ್ನು ತೆಗೆಯುತ್ತಲೇ ದುರ್ಬಲನಾದ. ವಿಷ್ಣುವು ಆಗ ನಾಗಾರ್ಜುನನನ್ನು ವಧಿಸಿದನು.

ಇಲ್ಲಿ ಬ್ರಾಹ್ಮಣ ಎಂದಾಗ ಪುರೋಹಿತ, ಜ್ಯೋತಿಷಿ ಎಂದು ಅರ್ಥಮಾಡಬೇಕು. ಇಂದಿನ ಸನ್ನಿವೇಶದಲ್ಲಿ ಬ್ರಾಹ್ಮಣ ಪುರೋಹಿತರು, ಜ್ಯೋತಿಷಿಗಳು ಮಾತ್ರವಲ್ಲ ಬ್ರಾಹ್ಮಣೀಕರಣಗೊಂಡ ಲಿಂಗಾಯತ ಪುರೋಹಿತರು, ಜೈನ ಪುರೋಹಿತರು ಎಲ್ಲರೂ ಬರುತ್ತಾರೆ. ಇವರೆಲ್ಲರೂ ಬಗೆಬಗೆಯ ಮೂಢನಂಬಿಕೆ ಬೆಳೆಸುವರು. ಭಯಗ್ರಸ್ತ ಮನಃಸ್ಥಿತಿಯನ್ನು ಸೃಷ್ಟಿಸುವರು, ವಿವಿಧ ಪರಿಹಾರ ಸೂಚಿಸಿ ಹಣವನ್ನು ಖರ್ಚು ಮಾಡಿಸುವರು; ತನ್ಮೂಲಕ ತಮ್ಮ ಪೋಷಣೆ ಮಾಡಿಕೊಳ್ಳುವರು.

ಶರಣರು ಅಧ್ಯಾತ್ಮ ಜೀವಿಗಳು ಅವರು ಜ್ಯೋತಿಷಿ, ಪುರೋಹಿತರ ಮಾತುಗಳನ್ನು ನಂಬದೆ ಭಕ್ತರ ಮಾತನ್ನು ನಂಬುವುದರಿಂದ (ಗುರುಗಳ, ಮಹಾತ್ಮರ ಮಾತಿನಲ್ಲಿ ವಿಶ್ವಾಸವಿಟ್ಟು ಪಾರಮಾರ್ಥ ಪಥದಲ್ಲಿ ನಡೆಯುವ ಕಾರಣ ಕೈಲಾಸವನ್ನು ಹೊಂದುವರು.)

ಈ ವಚನವು ಗುರು ಬಸವಣ್ಣನವರು ನಮ್ಮ ಧರ್ಮ ದ್ರಷ್ಟಾರರಾಗುವ ಮೊದಲು ಶಿವಭಕ್ತರಾಗಿದ್ದಾಗ ಬರೆದ ವಚನ. ಆದ್ದರಿಂದ ಕೈಲಾಸವಾಸಿಗಳಾಗುವರು ಎಂದು ಬಳಸಿದ್ದಾರೆ.

571. ದೇವರ ಪುರಾಣಕ್ಕೆ ಸಮನಾವುದೂ ಇಲ್ಲ.

ಆದಿ ಪುರಾಣ ಅಸುರರಿಗೆ ಮಾರಿ,
ವೇದ ಪುರಾಣ ಹೋತಿಂಗೆ ಮಾರಿ
ರಾಮಪುರಾಣ ರಕ್ಕಸರಿಗೆ ಮಾರಿ,
ಭಾರತಪುರಾಣ ಗೋತ್ರಕ್ಕೆ ಮಾರಿ
ಎಲ್ಲಾ ಪುರಾಣ ಕರ್ಮಕ್ಕೆ ಮೊದಲು
ನಿಮ್ಮ ಪುರಾಣಕ್ಕೆ ಪ್ರತಿಯಲ್ಲ.
ಲಿಂಗದೇವಾ. –ಬ.ವ.ದೀ. 569

ಆದಿ ಪುರಾಣ ಎಂದರೆ ಆದಿಶಕ್ತಿ ಎಂದು ಕರೆಯಲ್ಪಡುವ ದೇವಿಯ ಪುರಾಣ. ಇದರ ತುಂಬೆಲ್ಲ ಅ+ಸುರರ (ಅನಾರ್ಯರ) ಸಂಹಾರದ ವರ್ಣನೆ; ವೇದಗಳಲ್ಲಿ ಹೋತವನ್ನು (ಅಶ್ವ, ಗಜ ಮುಂತಾದುವನ್ನು) ಹೇಗೆ ಯಜ್ಞದಲ್ಲಿ ಬಲಿ ಕೊಡಬೇಕು, ಯಾವ ಮಂತ್ರವನ್ನು ಹೇಳಬೇಕು ಎಂಬುದರ ವರ್ಣನೆ; ರಾಮಾಯಣವು ರಾಕ್ಷಸರನ್ನು ರಾಮನು ಹೇಗೆ ಸಂಹರಿಸಿದನು ಎಂಬುದರ ವರ್ಣನೆ; ಮಹಾಭಾರತವು ಅಣ್ಣ-ತಮ್ಮಂದಿರೇ ಪರಸ್ಪರ ಹೇಗೆ ಹೊಡೆದಾಡಿ ಸತ್ತರು ಎಂಬುದರ ವರ್ಣನೆ. ಈ ಎಲ್ಲ ಪುರಾಣ ಕೃತಿಗಳು ಹಿಂಸೆಯ, ಬಗೆಬಗೆಯ ಪಾಪ ಮಾಡಿ ಕೊಲ್ಲಿಸಿಕೊಂಡವರ ಕಥೆಗಳು. ಲಿಂಗದೇವನ ಮಹಿಮೆ ಸಾರುವ, ದೇವನನ್ನು ಹಾಡಿ ಹೊಗಳುವ ವಚನಗಳೆಂಬ ಲಿಂಗದೇವನ ಪುರಾಣ ಅಪ್ರತಿಮ. ಅವಕ್ಕೆ ಸಮವಾಗಿ ಯಾವುದೇ ಪುರಾಣಗಳಿಲ್ಲ; ಇವು ಕರ್ಮ ನಿವಾರಕ, ಮನಃಶಾಂತಿದಾಯಕ. ಇವು ಕೊಂದವರ ಕಥೆಗಳಾಗದೆ ಪಾಮರರನ್ನು ಉಳಿಸಿದ ಉದ್ಧರಿಸಿದ ಶರಣರ ದಿವ್ಯ ವಾಣಿ.

572. ವೇದ ಶಾಸ್ತ್ರಗಳು ದೇವರ ವಾಣಿಯಲ್ಲ

ನಿಮ್ಮ ವಚನವೆನ್ನ ಪುಣ್ಯವೆಂಬುದು ಹುಸಿಯಾಯಿತ್ತು, ನೋಡಾ,
ಶಾಸ್ತ್ರದ ವಚನ ಹೋತಿಂಗೆ ಮಾರಿ;
ಎಂತು ನಂಬುವೆನಯ್ಯಾ?
ನಾನು ಕೊಲ್ಲೆ, ನೇಣು ಕೊಂದಿತ್ತೆಂಬ ಸೂನೆಗಾರರನೇನೆಂಬೆ,
ಲಿಂಗದೇವಾ? –ಬ.ವ.ದೀ. 570

ದೇವರ ವಾಣಿಯನ್ನು ಅನುಷ್ಠಾನಕ್ಕೆ ತರುವುದು ಪುಣ್ಯದ ಕೆಲಸ. ವೇದವೆಂಬುದು ದೇವರ ವಾಣಿ. ವೇದಗಳು ಹೋತವನ್ನು ಕೊಲ್ಲಲು ಹೇಳಿವೆ.

ಆದ್ದರಿಂದ ಹೋತವನ್ನು ಯಜ್ಞದಲ್ಲಿ ಕೊಲ್ಲುವುದು ಪುಣ್ಯದ ಕೆಲಸ. ಹೇಗಿದೆ ಈ ವಿಚಿತ್ರ ತರ್ಕ?! ಹೋತವನ್ನು ಕೊಲ್ಲುವುದು ಹಿಂಸೆ, ಹಿಂಸೆಯಿಂದ ಪಾಪ. ಇದು ಸರಿಯೆ? ಎಂದು ಸಾತ್ವಿಕರು ಪ್ರಶ್ನಿಸಿದರೆ ಹಿಂಸಾತ್ಮಕ ಯಜ್ಞ ಮಾಡುವವರು, "ವೇದಗಳು ಹೇಳಿವೆ. ಅವುಗಳ ಅನುಷ್ಠಾನ ನಮ್ಮ ಕರ್ತವ್ಯ! ಆದ್ದರಿಂದ ನಮಗೆ ಪಾಪ ಬರದು" ಎಂದು ಹೇಳುವರು. ಇದು ಎಷ್ಟು ವಿಚಿತ್ರ ವಾದ, ವೇದ ಶಾಸ್ತ್ರಗಳು ದೇವರ ವಾಣಿಯೇ ಆಗಿದ್ದರೆ ಹಿಂಸೆಯನ್ನು ಬೋಧಿ

ಸುತ್ತಿದ್ದವೆ? ಇದನ್ನು ಹೇಗೆ ನಂಬುವುದು? ದೇವರು ಕ್ರೂರಿಯೆ?, ತಾನೇ ಸೃಷ್ಟಿಸಿದ ಜೀವದ ಬಲಿಯನ್ನು ಬೇಡುವನೆ? ನಾನು ಕೊಲ್ಲುತ್ತಿಲ್ಲ ಹಗ್ಗವು ಕೊಂದಿತು ಕತ್ತಿಯು ಕೊಂದಿತು ಎಂದು ಕಟುಕನು ಹೇಳಿದಂತಾಗುವುದು. ಪ್ರಾಣಿಗಳನ್ನು ವಧಿಸುವ ಕಟುಕ ಕನಿಷ್ಠ; ಯಜ್ಞದಲ್ಲಿ ಮಂತ್ರ ಸಹಿತವಾಗಿ ಆಡನ್ನು ಗುದ್ದಿ ಗುದ್ದಿ ಕೊಂದು ತುಪ್ಪದಲ್ಲಿ ಎದ್ದಿ ಬೇಯಿಸಿ ಯಜ್ಞ ಪ್ರಸಾದವೆಂದು ತಿನ್ನುವ ವಿಪ್ರ ಶ್ರೇಷ್ಠನೆ? ಎಂತಹ ವಿಚಿತ್ರ ಸಿದ್ಧಾಂತವಿದು?!

573. ಹಿಂಸೆಗೆ ತಕ್ಕ ಶಿಕ್ಷೆ

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೇ ಅಳು ಕಂಡಾ!
ವೇದವನೋದಿದವರ ಮುಂದೆ ಅಳು ಕಂಡಾ!
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ!
ನೀನತ್ತುದಕ್ಕೆ ತಕ್ಕುದ ಮಾಡುವ ನಮ್ಮ ಲಿಂಗದೇವ. -ಬ.ವ.ದೀ. 571

ಕೆಲವರು ಆಡಿದ ಮಾತುಗಳನ್ನೇ ಶಾಸ್ತ್ರವಾಗಿ ಪರಿಗಣಿಸಿ ನಿನ್ನನ್ನು ಕೊಲ್ಲುತ್ತಿದ್ದಾರೆಂದು ಎಲೈ ಹೋತವೇ ಅಳು ನೀನು! ವೇದ ಮಂತ್ರಗಳನ್ನು ಹೇಳುತ್ತಾ ನಿನ್ನನ್ನು ಗುದ್ದಿ ಗುದ್ದಿ ಕೊಲ್ಲುವವರ ಮುಂದೆ ಅಳು ನೀನು. ಸ್ವಾರ್ಥಿಗಳು ಬರೆದ ಶಾಸ್ತ್ರ ವಾಕ್ಯಗಳನ್ನು ಉದಾಹರಿಸಿ ಹೇಳುವ ಮಾತುಗಳನ್ನು ಕೇಳುವವರ ಮುಂದೆ ನೀನು ಅಳು, ನಿನ್ನ ಆರ್ತಧ್ವನಿ ನಿನ್ನನ್ನು ಸೃಷ್ಟಿಸಿದ ಕರುಣಾಮಯಿ ದೇವನಿಗೆ ಖಂಡಿತಾ ಕೇಳುವುದು. ನಿನ್ನ ಕಣ್ಣೀರು ಇವರ ಮನಸ್ಸನ್ನು ಕರಗಿಸದೆ ಇದ್ದರೂ ದೇವನಿಗೆ ತಟ್ಟದೆ ಇರದು. ಈ ಕ್ರೂರಿಗಳಿಗೆ ತಕ್ಕ ಶಿಕ್ಷೆಯನ್ನು ದೇವರು ವಿಧಿಸುವನು.

ಈ ವಚನವು ಒಂದು ದೃಶ್ಯವನ್ನು ಕಣ್ಣಿಗೆ ಕಟ್ಟಿಸುತ್ತದೆ. ಯಜ್ಞ ಕುಂಡ, ಅದರ ಸುತ್ತ ಋತ್ವಿಕರು, ಗುದ್ದುಗಳ ನೋವು ತಡೆಯದೆ ಕಣ್ಣೀರು ಸುರಿಸುವ ಹೋತ. ಮಂತ್ರಗಳನ್ನು ಹೇಳುವ ಶಾಸ್ತ್ರಿಗಳು; ಅದನ್ನು ಕೇಳುತ್ತ ಕುಳಿತ ವಿಪ್ರಸಮೂಹ, ತಂದೆಯ ಜೊತೆ ಇದೆಲ್ಲವನ್ನು ನೋಡುತ್ತ ಹೋತದ ನೋವನ್ನು ತಾನು ಅನುಭವಿಸುತ್ತ ತಾನೂ ನಿಸ್ಸಹಾಯಕನಾಗಿ ಕಣ್ಣೀರು ಸುರಿಸುವ ಬಾಲಕ ಬಸವರಸ. ಅಸಹಾಯಕನಾಗಿ ಬಾಲಕ ಹೇಳುತ್ತಾನೆ, "ಎಲೆ ಹೋತೆ; ಅಳು ಕಂಡೆಯಾ. ನೀನತ್ತುದಕ್ಕೆ ತಕ್ಷ ಶಿಕ್ಷೆಯನ್ನು ದೇವನು ನಿನ್ನನ್ನು ಕೊಲ್ಲುವವರಿಗೆ ನೀಡುವನು".

(ನನ್ನ ಜೀವನದ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ನಾನಿನ್ನೂ ಚಿಕ್ಕ ಹುಡುಗಿಯಾಗಿದ್ದೆ ನಾನು ಹುಟ್ಟಿದ ಹಳ್ಳಿ -ಸಾಸಲಟ್ಟಿ ಒಂದು ಕುಗ್ರಾಮ. ನಮ್ಮ ಮನೆಯ ಪಕ್ಕ ಒಂದು ಬನ್ನಿಮರವಿತ್ತು. ಅದಕ್ಕೊಂದು ಕಟ್ಟೆ ಕಟ್ಟಿ; ಕಟ್ಟೆ ಮೇಲೆ ಒಂದು ಗೂಡು ಮಾಡಲಾಗಿತ್ತು. ಮಂಗಳವಾರ ಗೂಡಿನಲ್ಲಿದ್ದ ದೀಪಕ್ಕೆ ಎಣ್ಣೆ ಹಾಕಿ ದೀಪ ಹಚ್ಚಿ ಬರುವುದರ ಜೊತೆಗೆ ಎಡೆ ಒಯ್ದು ಗಿಡಕ್ಕೆ ನೈವೇದ್ಯ ಮಾಡಿ ಬರುವ (ಮೂಢ) ಪರಿಪಾಠವಿತ್ತು. ಒಮ್ಮೆ ಮಾರಿ ಹಬ್ಬ, ಪಟ್ಟದ ಕೋಣದ ಮತ್ತು ಹರಕೆಯ ಕುರಿಗಳ ಬಲಿ ಏರ್ಪಡಾಗಿತ್ತು. ಕೋಣದ ಕಡಿದ ತಲೆ, ಹೊರಬಂದ ಕಣ್ಣು ಆ ಭೀಭತ್ಸ ದೃಶ್ಯ ನೋಡಿ ಅತ್ತೂ ಅತ್ತೂ ಇಟ್ಟೆ. ಎಷ್ಟೋ ದಿನ ಈ ದೃಶ್ಯ ಕಣ್ಣಿಂದ ಮರೆಯಾಗಿರಲಿಲ್ಲ.)

ಅನಾಥಾಲಯ ಮತ್ತು ಮೆಟ್ರಿಕ್‌ಪೂರ್ವ ಬಾಲಕಿಯರ ವಸತಿ ನಿಲಯಕ್ಕೆ ಪ್ರವೇಶಾವಕಾಶ

ವಿಶ್ವಕಲ್ಯಾಣ ಮಿಷನ್ ಮತ್ತು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ ಕೆಳಕಂಡ ಸಂಸ್ಥೆಗಳು ನಡೆಯುತ್ತಿವೆ.

1. **ಬೆಂಗಳೂರಿನ ಬಸವ ಗಂಗೋತ್ರಿ, ಅನಾಥಾಲಯ:** ಬೆಂಗಳೂರು -ಮೈಸೂರು ಹೆದ್ದಾರಿಯಲ್ಲಿ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿರುವ ಬಸವ ಗಂಗೋತ್ರಿ ಅನಾಥಾಲಯ.
2. **ಕೂಡಲ ಸಂಗಮ :** ಬಸವ ಕೃಪಾ ಅನಾಥಾಲಯ (ಕೇವಲ ಬಾಲಕರಿಗೆ ಮಾತ್ರ) ಕೂಡಲ ಸಂಗಮದ ಮಹಾಮನೆ ಮಹಾಮಠದ ಆವರಣದಲ್ಲಿ
3. **ಬಸವ ಕಲ್ಯಾಣ** - ಅಕ್ಕನಾಗಲಾಂಬಿಕಾ ಅನಾಥಾಲಯ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ
4. **ಧಾರವಾಡ** - ಅಕ್ಕಮಹಾದೇವಿ ಅನಾಥಾಲಯ, ಅಕ್ಕಮಹಾದೇವಿ ಆಶ್ರಮ, ಧಾರವಾಡ
5. **ಬಸವ ಕಲ್ಯಾಣ** -ಮುಕ್ತಾಯಕ್ಕ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ
6. **ಬೀದರ ಬಸವ ಮಂಟಪ** - ನೀಲಾಂಬಿಕಾ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ (5ನೆಯ ತರಗತಿಯಿಂದ ಮ್ಯಾಟ್ರಿಕ್‌ವರೆಗೆ)

ಒಂದನೆಯ ತರಗತಿಯಿಂದ ಮ್ಯಾಟ್ರಿಕ್‌ವರೆಗೆ ಬಾಲಕ -ಬಾಲಕಿ ಉಭಯತರಿಗೂ ಅನಾಥಾಲಯ (ನಿರ್ಗತಿಕ ಮಕ್ಕಳ ಕುಟೀರ)ದಲ್ಲಿ ಪ್ರವೇಶ ಅವಕಾಶವಿದೆ. ಊಟ -ವಸತಿ-ಶಿಕ್ಷಣ ಎಲ್ಲವೂ ಉಚಿತ. ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ (ಬಸವ ಕಲ್ಯಾಣ ಮತ್ತು ಬೀದರ್)ಕ್ಕೆ ಕೇವಲ ಬಾಲಕಿಯರಿಗೆ ಮಾತ್ರ ಪ್ರವೇಶಾವಕಾಶ.

ಆಯಾ ಪ್ರದೇಶಗಳವರು ತಮಗೆ ಸಮೀಪವಿರುವ ಅನಾಥಾಲಯಗಳಲ್ಲಿ ಮಕ್ಕಳನ್ನು ಸೇರಿಸಬಹುದು.

ವಿವರಗಳಿಗಾಗಿ ಸಂಪರ್ಕಿಸಿರಿ:

1. ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ, ಬಸವ ಗಂಗೋತ್ರಿ (94448386717)
2. ಪೂಜ್ಯ ಶ್ರೀ ಮಾದೇಶ್ವರ ಸ್ವಾಮಿಗಳು, ಕೂಡಲ ಸಂಗಮ (9341819847)
3. ಪೂಜ್ಯ ಶ್ರೀ ಬಸವ ಪ್ರಭು ಸ್ವಾಮಿಗಳು, ಬಸವ ಕಲ್ಯಾಣ (9480497346)
4. ಶರಣೆ. ನೀಲಾಂಬಿಕಾ ಇಂಗಳಳ್ಳಿ, ಧಾರವಾಡ (9886667244)
5. ಶರಣೆ. ಶಾಂತಾದೇವಿ.ಎಸ್.ಬಿರಾದಾರ, ಬಸವ ಕಲ್ಯಾಣ (8951732580)
6. ಪೂಜ್ಯ ಶ್ರೀ ಮಾತೆ ನಿಶ್ಚಲಾಂಬ, ಬೀದರ (9663502141)

ಸಾಧಕರ ಜೀವನದ ಕೀಟಗಳು

-ಮಾತಾಜಿ

ತರಂಗಿಣಿಯಲ್ಲಿ ನಾನು ಬರೆದಿದ್ದೇನೆ. ವಸಂತ ಮಾಸದಲ್ಲಿ ಮಾವಿನ ಗಿಡದ ತುಂಬ ಹೂ ಬಿಡುತ್ತವೆ. ಅವೆಲ್ಲವೂ ಕಾಯಾಗವು, ಕಾಯಿಗಳೆಲ್ಲ ಹಣ್ಣಾಗವು. ಹಾಗೆಯೇ ಅನೇಕ ಜನರಿಗೆ ವೈರಾಗ್ಯದ ಪ್ರೇರಣೆ ಬರುತ್ತದೆ. ಸಾಧಕ ಜೀವನಕ್ಕೂ ಬರುತ್ತಾರೆ. ಆದರೆ ಗುರಿ ಮುಟ್ಟುವವರೆಗೆ ಅಚಲವಾಗಿರುವವರು ಬಹಳ ಕ್ವಚಿತ್. ಸುಳಿದೆಗೆದು ಬೆಳೆಯುತ್ತ ತೆಂಗಿನ ಗಿಡ ಮೇಲೇರುವಾಗ ಅದರ ಸುಳಿಯನ್ನು ಕಡಿಯುವ ಕೀಟಗಳು ಎರಗುವವು. ಒಂದು ಲಗ್ನ ಪತ್ರಿಕೆ ಬಂದಿತು. ನೋಡುತ್ತಲೇ ಹಿಂದಿನದು ನೆನಪಾಯಿತು. ಒಮ್ಮೆ ಒಂದು ದಿನದ ಕಾರ್ಯಕ್ರಮಕ್ಕೆ ಹೋಗಿದ್ದೆವು. 5 ವರ್ಷದ ಒಬ್ಬ ಹುಡುಗಿ ಅದ್ಭುತವಾಗಿ ಭಾಷಣ ಮಾಡಿದಳು. ಆಕೆಯ ಗ್ರಹಣ ಶಕ್ತಿ ನೆನಪಿನ ಶಕ್ತಿ ಅಸಾಮಾನ್ಯವಾಗಿದ್ದವು. ಆ ಬಾಲಕಿಯನ್ನು ತಂದು ಬಿಡಿರಿ ಎಂದು ತಾಯಿ ತಂದೆಗೆ ಹೇಳಿದಾಗ ಸಂತೋಷದಿಂದ ತಂದು ಬಿಟ್ಟರು. ತುಂಬಾ ಚೆನ್ನಾಗಿ ಓದ ತೊಡಗಿದಳು. ಆಕೆಯ ಪ್ರತಿಭೆ ಕಂಡು ನಾವು ಹರ್ಷಿತರಾಗಿ ಆಕೆ ಇಷ್ಟಪಟ್ಟಷ್ಟು ಓದಿಸೋಣ ಎಂದು ಕೊಂಡೆವು. ಎಂಟನೆಯ ತರಗತಿಯಲ್ಲಿರುವಾಗ ಆಕೆಯ ವರ್ತನೆಯಲ್ಲಿ ಬದಲಾವಣೆ ಕಂಡಿತು. ಅದಕ್ಕೆ ಕಾರಣ ಒಬ್ಬ ಹುಡುಗ. ಅವನು ಓದುತ್ತಲೇ ಈ ಹುಡುಗಿಯ ಮೇಲೆ ತನ್ನ ಪ್ರಭಾವ ಬೀರತೊಡಗಿದ. ಇನ್ನೂ ಚಿಕ್ಕ ಹುಡುಗಿ. "ನಿನ್ನಲ್ಲಿ ಪ್ರತಿಭೆ ಅಸಾಮಾನ್ಯವಾಗಿದೆ. ಪ್ರೀತಿ-ಪ್ರೇಮದ ಆಟ ಆಡುವ ವಯಸ್ಸಲ್ಲ. ಗುರಿಯ ಕಡೆ ಗಮನವಿರಲಿ. ಭವಿಷ್ಯ ಹಾಳು ಮಾಡಿಕೊಳ್ಳ ಬೇಡ" ಎಂದು ಬುದ್ಧಿವಾದ ಹೇಳಿದರೂ ತಲೆಯಲ್ಲಿ ಹೋಗಲಿಲ್ಲ. ಜಾಗ ಬದಲಿಸಿ ಸ್ಕೂಲಿಗೆ ಸೇರಿಸಿದೆವು. ಮೊಬೈಲ್ ಮೂಲಕ ಪ್ರೇಮದ ಧಾರಾವಾಹಿ ಸಾಗಿತು. ಆಶ್ರಮಕ್ಕೆ ಕೆಟ್ಟ ಹೆಸರು ಬಂದೀತು ಎಂದು ಆಕೆಯ ತಂದೆಯನ್ನು ಕರೆಸಿ ಮೊದಲೇ ವಿಷಯವನ್ನು ತಿಳಿಸಿಯೂ ಇದ್ದೆವು. ಬುದ್ಧಿವಾದ ತಲೆಗೆ ಈ ನಶೆಯಲ್ಲಿ ಹೋಗದು ಎಂದು ನಿರ್ಧರಿಸಿ ಕರೆದುಕೊಂಡು ಹೋಗಲು ಅವರ ತಂದೆಗೆ ತಿಳಿಸಿದೆವು. ಅವರೂ ಸಹ ದುಃಖಪಟ್ಟರು. "ಬಿಟ್ಟೆನೆಂದರೆ ಬಿಡದೀ ಮಾಯೆ" ಎಂಬಂತೆ ಈಕೆ ಸುಮ್ಮನಿದ್ದರೂ ಇರದಂತೆ ಆತ ಬೆನ್ನು ಹತ್ತಿದ. ಹೆಣ್ಣು ಮಕ್ಕಳ ಬಳಿ ಹಣವೂ ಇರದು ಮುಕ್ತವಾಗಿ ತಿರುಗಾಡಲೂ ಆರರು. ಆತ ನಮ್ಮೆಲ್ಲರ ಕಣ್ಣು ತಪ್ಪಿಸಿ ಬರುವುದು, ಶಾಲೆ ಬಳಿ ಹೋಗಿ ಭೇಟಿಯಾಗುವುದು ಮಾಡತೊಡಗಿದ. ಆಕೆಯ ತಂದೆ ಕರೆದೊಯ್ದರು. ಹೆಚ್ಚಿನ ವಿದ್ಯಾಭ್ಯಾಸವೂ ಆಗಲಿಲ್ಲ. ಈಗ ಆತ ಜಂ ಅಂತ ಆಕೆಯನ್ನು ಮರೆತು, ಕೈಬಿಟ್ಟು ಇನ್ನೊಂದು ಹುಡುಗಿಯನ್ನು ಮದುವೆಯಾಗಲು ಸಿದ್ಧನಾಗಿರುವ ವಿವಾಹದ ಆಹ್ವಾನ ಪತ್ರ ನೋಡಿ ತುಂಬಾ ಕಸಿವಿಸಿಯಾಯಿತು. ಜಾತಿ ಅಡ್ಡ ಬಂದಿತೋ ಅಥವಾ ವರದಕ್ಷಿಣೆ ಸಿಕ್ಕಿತೋ ಆತನೇನೋ ಸುಖ ಜೀವನಕ್ಕೆ ನಡೆದ. ಅವನನ್ನು ನಂಬಿ ತನ್ನ ಪ್ರತಿಭಾತ್ಮಕ ಭವಿಷ್ಯವನ್ನು ಹಾಳುಗೆಡವಿಕೊಂಡ ಆ ಹುಡುಗಿಯದು ದುರ್ದೈವವಷ್ಟೇ ಅಲ್ಲ ಆಕೆ ಉನ್ನತ ಮಟ್ಟಕ್ಕೆ ಏರಿದ್ದರೆ ಅವಳಿಂದ ನಾಡು ನುಡಿ ಸಮಾಜಕ್ಕೆ ಎಷ್ಟು ಒಳ್ಳಿತಾಗುತ್ತಿತ್ತೋ! ಸುಳಿದೆಗೆದು ಬೆಳೆಯುವ ಗಿಡವನ್ನು ಕಡಿದ ವಜ್ರ ದುಂಬಿ ತಾನು ಹಾರಾಡುವುದು, ಗಿಡಮಾತ್ರ ಒಣಗಿ ಹೋಗುವುದಲ್ಲವೆ? ಇದು ಅವಳ ದುರಾದೃಷ್ಟವೋ ಸಮಾಜದ ದುರಾದೃಷ್ಟವೊ. ನಾನು ಎಷ್ಟೋ ಬಾರಿ ಇಂಥ ಪ್ರೇಮಿಗಳಿಗೆ ಹೇಳುವುದುಂಟು, "ಜಗತ್ತಿನ ತುಂಬಾ ಹೆಂಗಸರಿದ್ದಾರೆ/ ಗಂಡಸರಿದ್ದಾರೆ. ಲೌಕಿಕರಲ್ಲಿ ಸಂಗಾತಿಯನ್ನು ಹುಡುಕಿಕೊಳ್ಳಿರಿ. ಆದರ್ಶವಾದಿಗಳ ಮೇಲೆ ಏಕೆ ಕಣ್ಣು ಹಾಕಿ ಅವರ ಪತನ ಮಾಡಿ

ಸಮಾಜಕ್ಕೆ ನಷ್ಟ ಉಂಟು ಮಾಡುತ್ತೀರಿ!" ಎಂದು.

ಇಂಥದೇ ವ್ಯಕ್ತಿ ನಿವೇದಿತಾಳನ್ನು ಮದುವೆಯಾದ ಚೇತನನು ಸಹ. (ಝೀ ಟಿ.ವಿ. ಸಂದರ್ಶನ 8-3-2011) ಆಕೆ ಹೇಳುತ್ತಾಳೆ: ನನಗೇನೂ ಆಸಕ್ತಿ ಇರಲಿಲ್ಲ. ಪ್ರೀತಿ-ಪ್ರಣಯದ ಭಾವನೆ ಇರಲಿಲ್ಲ. ಈತನೇ ಪ್ರೇರಣೆ ನೀಡಿದ ಎಂದು. ಸನ್ಯಾಸಿನಿಯಾಗಿದ್ದ ಓರ್ವ ಮಹಿಳೆಯ ಮೇಲೆ ಕಣ್ಣು ಹಾಕಿದ್ದು ಒಂದು ವಿಪರ್ಯಾಸವೇ ಸರಿ. ಹಾಗೆಂದು ಎಲ್ಲ ತಪ್ಪನ್ನು ಚೇತನನ ಮೇಲೆ ಹಾಕಿಬಿಡಲು ಆಗುವುದಿಲ್ಲ. ಎರಡೂ ಕೈ ಸೇರಿದರೆ ಚಪ್ಪಾಳೆ. ಒಂದು ಕೈ ಮುಂದೆ ಬಂದಾಗ ಇನ್ನೊಂದು ಕೈ ಹಿಂದೆ ಸರಿದು ಬಿಟ್ಟರೆ ಚಪ್ಪಾಳೆ ಹೇಗೆ ಸಾಧ್ಯ? ಚೇತನನೆಂಬ ಒಬ್ಬ ಯುವಕ ಕೌಶಿಕನಷ್ಟು ಪ್ರಭಾವಶಾಲಿ ಅಲ್ಲವಷ್ಟೇ? ತನ್ನಲ್ಲಿ ಗುರಿ ಅಚಲವಾಗಿದ್ದಿದ್ದರೆ ನಿವೇದಿತಾ ಸೋಲುತ್ತಿರಲಿಲ್ಲ. ಸನ್ಯಾಸ ನೀಗಲಾರದೆ ಆಕೆ ಪ್ರಾಮಾಣಿಕವಾಗಿ ಅದನ್ನು ತೊರೆದು ಮದುವೆಯಾಗಿದ್ದಾಳೆ. ಆಶೀರ್ವದಿಸೋಣ. ಆದರೆ ಆಕೆ ಕೊಡುವ ಕಾರಣಗಳು ಬಲವಾಗಿಲ್ಲ.

1. ನನ್ನನ್ನು ಅನಾಥ ಪ್ರಜ್ಞೆ ಕಾಡಿತು
2. ಸಿರಸಿ ಮಠದ ಸುತ್ತ ಇರುವವರು ಕಿರುಕುಳ ಕೊಟ್ಟರು.
3. ಒಬ್ಬರು ವಯಸ್ಕ ಸ್ವಾಮಿಗಳು ಮತ್ಸರಪಟ್ಟರು
4. ಯಾರೋ ಜಾಗ ಕೊಡುತ್ತೇವೆ ಎಂದಾಗ ಮತ್ತೊಬ್ಬರು ಹಚ್ಚಿಕೊಟ್ಟು ಕೊಡಲಾರದಂತೆ ಮಾಡಿದರು.
5. ಹಿರಿಯ ಸ್ವಾಮಿಗಳಿಗೆ ನನ್ನಿಂದ ತೊಂದರೆಬೇಡ ಎಂದು ಸನ್ಯಾಸ ತೊರೆದೆ ಇವೆಲ್ಲ ಕಾರಣಗಳಲ್ಲ. ನಮಗೆಲ್ಲ ಅಕ್ಕಮಹಾದೇವಿ ಮಾರ್ಗದರ್ಶಕಳು."ಚನ್ನಮಲ್ಲಿಕಾರ್ಜುನ, ಆತ್ಮ ಸಂಗಾತಕ್ಕೆ ನೀನೆನಗುಂಟು." ಎಂದು ಹೇಳಿ ಸಾಧಕರು ನಂಬಬೇಕಾದುದು ದೇವರನ್ನು ಎಂದು ತಿಳಿಸುತ್ತಾಳೆ. ಅನಾಥ ಪ್ರಜ್ಞೆ ಸಾಧಕರನ್ನು ಕಾಡಲೇಬಾರದು.

ಈ ಜಗತ್ತಿನ ಜನಗಳ ಸ್ವಭಾವವೇ ವಿಚಿತ್ರ. ಆಡಿಕೊಳ್ಳುವುದರಲ್ಲಿ ಬಲು ಮುಂದು. ಅದು ಕಿರುಕುಳ ಎಂದು ಭಾವಿಸಿ, ಹತಾಶರಾಗಬಾರದು. ಅಂಥವರೇ ಆದರ್ಶಗಳನ್ನು ಗಟ್ಟಿಗೊಳಿಸುವ ಹಿತಚಿಂತಕರು ಎಂಬ ಭಾವದಿಂದಲೇ ಗುರು ಬಸವಣ್ಣನವವರು ಬೈದವರೆನ್ನ ಬಂಧುಗಳೆಂಬೆ ಎಂದು ಹೇಳಿರುವುದು. ಅಂಥ ಕಿರುಕುಳ ಎರಗಿದಾಗ ಅಕ್ಕನ ಈ ವಚನವು ನಮಗೆ ನೆರವಾಗುತ್ತದೆ.

ಹೆದರದಿರು ಮನವೆ, ಬೆದರದಿರು ತನುವೆ;
ನಿಜವನರಿದು ನಿಶ್ಚಿಂತವಾಗಿರು ಮನವೆ!
ಫಲವಾದ ಮರನ ಕಲ್ಲಲ್ಲಿ ಇಡುವುದೊಂದು ಕೋಟಿ;
ಎಲವದ ಮರನ ಇಡುವರೊಬ್ಬರ ಕಾಣೆ.
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿ ಇಲ್ಲದವರ ಬೈವರೊಬ್ಬರ ಕಾಣೆ.
ನಿಮ್ಮ ಶರಣರ ನುಡಿಯೆ ಎನಗೆ ಗತಿ, ಸೋಪಾನ
ಚನ್ನಮಲ್ಲಿಕಾರ್ಜುನಾ.

ನಿಂದೆ, ತೊಂದರೆ ಕಿರುಕುಳ ಒದಗಿದಾಗ ಮನಸ್ಸು, ತನು ಹೆದರಬಾರದು, ಬೆದರಬಾರದು ನಿಜವನ್ನರಿತು ಗುರಿಯ ಕಡೆ ನಡೆಯುತ್ತ ನಿಶ್ಚಿಂತವಾಗಿ ಇರಬೇಕು. ಏಕೆಂದರೆ ಸಮಾಜವು

ಆದರ್ಶವಂತರನ್ನೇ ಟೀಕಿಸುತ್ತದೆ, ಕಾಡಿಸುತ್ತದೆ -ಫಲ ಬಿಟ್ಟ ಮರಕ್ಕೇ ಕಲ್ಲು ಎಸೆಯುವಂತೆ. ನಿಜವಾದ ಸಾಧಕರು ಶರಣರ ಜೀವನವನ್ನೇ ಮಾದರಿಯಾಗಿ ಇಟ್ಟುಕೊಂಡು ಅವರ ನುಡಿಗಳನ್ನೇ ಮಾರ್ಗದರ್ಶನಕ್ಕೆ ಇರಿಸಿಕೊಳ್ಳುತ್ತಾರೆ. ಸಮಾಜದ ಕಿರುಕುಳಗಳಿಗೆ ಸಾಧಕ ಹೆದರಬಾರದು. ಮತ್ತು ಇಡೀ ಸಮಾಜವೇ ಕೆಟ್ಟದಿರುವುದಿಲ್ಲ. ಅದರಲ್ಲಿ ಗುಣಗ್ರಾಹಕರು, ಆದರ್ಶವಾದಿಗಳಿಗೆ ಗೌರವ ಕೊಡುವವರು, ತತ್ವಾದರ್ಶಗಳ ಅನುಷ್ಠಾನಕ್ಕೆ ನೆರವು ನೀಡುವವರು ಇದ್ದೇ ಇರುತ್ತಾರೆ. ಅಂಥವರನ್ನು ಗುರುತಿಸಬೇಕು.

ಇನ್ನು ಮತ್ಸರದ ವಿಷಯ. ಯಾರನ್ನು ಕಂಡರೆ ಇರದು? ನಾವಂತೂ ಅಧ್ಯಾತ್ಮಿಕ, ವೈರಾಗ್ಯ ಪಥಕ್ಕೆ ಕಾಲಿಟ್ಟ ದಿನದಿಂದಲೂ ಮತ್ಸರವನ್ನು ಅನುಭವಿಸುತ್ತಲೇ ಇದ್ದೇವೆ. ಮತ್ಸರಿಗರು ಕೆಲವರಿದ್ದರೆ ಪ್ರೋತ್ಸಾಹಿಸುವವರು ಹಲವರು ಇರುತ್ತಾರೆ. ಇಡೀ ಜಗತ್ತೇ ಮೆಚ್ಚಬೇಕು ಎಂದು ನಿರೀಕ್ಷಿಸಲು ಆದೀತೆ? "ಯಾರೋ ಜಾಗ ಕೊಡುತ್ತೇವೆ" ಎಂದಾಗ ಮತ್ತೊಬ್ಬರು ಕೊಡುವವರಲ್ಲಿ ಜಗಳ ಹಚ್ಚಿಕೊಡದಂತೆ ಮಾಡಿದರು- ನಿವೇದಿತಾ ಕೊಟ್ಟ ಮತ್ತೊಂದು ಕಾರಣ . ಆಕೆ ಸನ್ಯಾಸ ತಗೊಂಡು ಅಧಿಕಾರಿಯಾಗಿ ಹೋದುದು ಮುರುಘಾಮಠದ ಶಾಖಾಮಠ. ಅಂದರೆ ಪ್ರತ್ಯೇಕವಾಗಿ ಜಾಗ ಪಡೆಯಲು ಬಯಸಿದ್ದರಿಂದ ಬಹುಶಃ ಸ್ವಾಮಿಗಳಿಂದ ಆಕ್ಷೇಪ, ವಿರೋಧ ಬಂದಿರಬಹುದು. ಮುರುಘಾಮಠಕ್ಕೆ ಆ ಜಾಗ ಪಡೆಯಲು ಯತ್ನಿಸಿದ್ದರೆ ಸ್ವಾಮಿಗಳು ಅದಕ್ಕೆ ಬೇಕಾದ ದಂಡು, ಸಿಬ್ಬಂದಿ, ಶಸ್ತ್ರಾಸ್ತ್ರ ಎಲ್ಲ ಕೊಡುತ್ತಲಿದ್ದರು ಅಂತ ಊಹಿಸಬಹುದು. ಕಂಡ ಕಂಡವರ ಆಸ್ತಿಗೆ ಕೈ ಹಾಕೋ ಅವರು (ಉದಾ: ಚಿತ್ರದುರ್ಗ ಬಸವ ಮಂಟಪ, ಬಸವ ಕಲ್ಯಾಣದಲ್ಲಿ ಖರೀದಿಸಿದ ಜಮೀನು) ಅವರ ಮಠಕ್ಕೆ ದಾನ ಕೊಡ್ತೀವಿ ಅಂದರೆ ಬಿಡುವವರೆ? 'ನಾನು ಸನ್ಯಾಸ ಬಿಟ್ಟರೆ ಹಿರಿಯ ಸ್ವಾಮಿಗಳಿಗೆ ಸಂತೋಷವಾಗಬಹುದು.' ಎಂದು ಬಿಟ್ಟೆ. ಎಂಬುದು ನಿವೇದಿತಾಳ ಮತ್ತೊಂದು ಕಾರಣ. ಇದೂ ಅಷ್ಟೆ ಅರ್ಥರಹಿತ ಕಾರಣ. ಬೇಡವಾದರೆ ಮಠವನ್ನು, ಅಧಿಕಾರವನ್ನು ಬಿಡಬಹುದಿತ್ತು, ತಾನಿಟ್ಟುಕೊಂಡ ಗುರಿಯನ್ನು ತೊಟ್ಟುಕೊಂಡ ಕಾಷಾಯ ವಸ್ತ್ರಗಳನ್ನು ಏಕೆ ಬಿಡಬೇಕಿತ್ತು? ಮತ್ಸರ ಪಡುವವರು ನಮ್ಮ ನಾಶವನ್ನು ಬಯಸುವರು, ಅವರಿಗೆ ಸಂತೋಷ ವಾಗುವುದಾದರೆ ಆಗಲಿ ಎಂದು ಪ್ರಾಣವನ್ನು ಬಿಡಲು ಆಗುವುದೆ?

ಒಮ್ಮೆ ನಾನು ಎಂ.ಎ. ಓದುವಾಗ ಶ್ರೀಸ.ಸ.ಮಾಳವಾಡರು ಮತ್ತು ಅವರ ಪತ್ನಿ ಶಾಂತಾದೇವಿ ಮಾಳವಾಡರು ಆಶ್ರಮಕ್ಕೆ ಬಂದರು. "ನಿಮ್ಮದು ಬಹಳ ಚಿಕ್ಕವಯಸ್ಸು, ಇಡೀ ಜೀವನ ದೀರ್ಘವಿದೆ. ಕಾವಿ ತೆಗೆದು ಬಿಡಿರಿ. ಆಗ ಕಷ್ಟಗಳು ಕಡಿಮೆ." ಎಂದು ಹಿತೋಪದೇಶ ಮಾಡಿದರು. "ದೀಕ್ಷಾಬದ್ಧವಾಗಿ ನಾನು ತೊಟ್ಟ ಕಾವಿ ಕೇವಲ ಬಟ್ಟೆಯಲ್ಲ, ಮೈಚರ್ಮದಷ್ಟು ಅವಿಭಾಜ್ಯ ಅಂಗ. ಆದ್ದರಿಂದ ಏನೇ ಕಷ್ಟಗಳು ಬಂದರೂ ಈ ಜೀವನವನ್ನು ತೊರೆಯುವುದಿಲ್ಲ." ಎಂದು ಹೇಳಿದ್ದೆ.

ನಿವೇದಿತಾ ಹೇಳಿದವು ಸೂಕ್ತ ಕಾರಣಗಳಲ್ಲ. ಆಕೆ ಮುರುಘಾಮಠದ ಶಾಖಾ ಮಠದ ಅಧಿಕಾರಿಣಿಯಾದ್ದರಿಂದ ಕೇಂದ್ರ ಸಂಸ್ಥೆಯ ಬಲ ಹಿಂದೆ ಇರಲೇಬೇಕು. ಅಂದಾಗ ಈ ಎಲ್ಲ ಕಷ್ಟಗಳನ್ನು ಎದುರಿಸುವ ಪ್ರಮೇಯ ಅಷ್ಟಾಗಿ ಬರದು. ಪ್ರವಚನ ಮಾಡುವ, ಧರ್ಮ ಪ್ರಚಾರ ಮಾಡುವ ಪ್ರಚಾರಕರಿಗೆ ಏನಾದರೂ ತೊಂದರೆ ಬಂದರೆ ನಾವು ತಕ್ಷಣ ನೆರವಿಗೆ ಧಾವಿಸುತ್ತೇವೆ. ಸಾಂಸ್ಥಿಕವಾಗಿ ಕೆಲಸ ಮಾಡುವವರಿಗೆ ಆ ಗುರು ಬಲ ಇರುತ್ತದೆ. ನಿವೇದಿತಾ ತಾನು ಎದುರಿಸಿದ

ಕಷ್ಟಗಳನ್ನು ಗುರುಗಳ ಮುಂದೆ ಹೇಳಿಕೊಳ್ಳಲಿಲ್ಲವೆ? ಒಂದು, ಏನಾದರೂ ಸ್ವಾರ್ಥಬಂದಿರಬೇಕು, ಇಲ್ಲವೇ ಚೇತನನನ್ನು ಕಂಡು ಮನಸ್ಸು ವಿಚಲಿತವಾಗಿರಬಹುದು ಇರಲಿ; ತನಗೆ ನೀಗಲಿಲ್ಲವೆಂದು ಸನ್ಯಾಸವನ್ನು ತೊರೆದು ಸಂಸಾರಿಯಾಗಿದ್ದಾಳೆ. ಇದೇನೂ ಆದರ್ಶವಲ್ಲ! ಆದರೂ ಮಾನವೀಯತೆ ಯಿಂದ ಶುಭ ಹಾರೈಸೋಣ.

ಬೆಂಗಳೂರು ಬಸವ ಮಂಟಪದಲ್ಲಿ
ದಿ. 20-03-2011ರಂದು ಪೂಜ್ಯ ಮಾತಾಜಿ ವರ್ಧಂತಿ

ಪೂಜ್ಯ ಶ್ರೀ ಮಾತಾಜಿಯವರ ಜನ್ಮದಿನೋತ್ಸವ ಕಾರ್ಯಕ್ರಮ ದಿ.13-3-2011ರಂದು ಗುಂಡ್ಲುಪೇಟೆಯಲ್ಲಿ ನಿಶ್ಚಿತವಾಗಿದ್ದರಿಂದ ಬೆಂಗಳೂರು ರಾಷ್ಟ್ರೀಯ ಬಸವ ದಳದವರು ದಿ.20 ರಂದು ವರ್ಧಂತಿ ಉತ್ಸವವನ್ನು ಏರ್ಪಡಿಸಿದ್ದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಬೆಂಗಳೂರು ಬಸವ ಮಂಟಪದ ಮುಂಭಾಗದಲ್ಲಿ ನಿರ್ಮಾಣವಾದ ಭವ್ಯಮಂಟಪದಲ್ಲಿ ಪೂಜ್ಯ ಮಾತಾಜಿಯವರ 66ನೆಯ ವರ್ಧಂತಿಯನ್ನು ಆಚರಿಸಲಾಯಿತು. ಲಿಂಗಾಯತ ಧರ್ಮ ಮಹಾಸಭಾದ ಗೌರವಾಧ್ಯಕ್ಷರಾದ ಶರಣ.ಎಸ್.ಪುಟ್ಟರುದ್ರ ಅವರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಆಡಳಿತ ಸೇವಾ ಅಧಿಕಾರಿಗಳು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಯೋಜನಾ ನಿರ್ದೇಶಕರಾದ ಶರಣ.ವಿರುಪಾಕ್ಷಿ ಮೈಸೂರು ಅವರು ಕಾರ್ಯಕ್ರಮವನ್ನು ದೀಪ ಹಚ್ಚಿ ಉದ್ಘಾಟಿಸಿದರು. ಮಾಜಿ ಸಚಿವೆಯೂ, ಪ್ರಗತಿಪರ ಚಿಂತಕರೂ ಆದ ಶ್ರೀಮತಿ ಬಿ.ಟಿ.ಲಲಿತಾ ನಾಯಕ ಅವರು ಬಾಲ್ಯದ ನೆನಪು ಮಾಡಿಕೊಂಡು "ಹೈಸ್ಕೂಲಿನಲ್ಲಿ ಉಭಯತರೂ ಒಟ್ಟಿಗೆ ಓದಿದೆವು. ನನಗೆ ಹೆಚ್ಚು ಓದಲು ಆಗಲಿಲ್ಲ. ಮಾತಾಜಿ ಹೆಚ್ಚಿನ ಸಾಧನೆ ಮಾಡಿದರು. ಮಹಿಳೆಗೆ ಅತ್ಯಂತ ಸೀಮಿತ ಅವಕಾಶ ಇರುವ ಸಮಯದಲ್ಲಿ ಸಂಪ್ರದಾಯದ ಒತ್ತಡ ಮೀರಿ ಮಾತಾಜಿ ಮುಂದೆ ಬಂದಿದ್ದಾರೆ." ಎಂದು ಶ್ಲಾಘಿಸಿದರು.

ಮುಖ್ಯ ಉಪನ್ಯಾಸಕರಾಗಿ ಬಂದಿದ್ದ ಶಿವಕುಮಾರ್ ಪಾವಟೆಯವರು, "ಬಸವಣ್ಣನವರ ತತ್ವಗಳು ಸಂಪೂರ್ಣ ಸಮಾನತೆಯನ್ನು ಬೋಧಿಸಿದರೂ ಅವುಗಳನ್ನು ಕ್ರಿಯಾರೂಪಕ್ಕೆ ತರುವವರ ಕೊರತೆ ಇತ್ತು 12ನೆಯ ಶತಮಾನದ ನಂತರ ಬಹುದೊಡ್ಡ ಕಂದಕ ಮೂಡಿತು. ಪೂಜ್ಯ ಮಾತಾಜಿ ಬಸವಣ್ಣನವರು ಬೋಧಿಸಿದ ಮಹಿಳಾ ಸಮಾನತೆಗೆ ಭಾಷ್ಯ ಬರೆವಂತೆ ಮಹಿಳಾ ಜಗದ್ಗುರು ಪೀಠವನ್ನು ಸ್ಥಾಪಿಸಿದುದು ಶ್ಲಾಘನೀಯ. ಅವರು ರೂಪಿಸಿದ ರಾಷ್ಟ್ರೀಯ ಬಸವ ದಳ ಸಂಘಟನೆ ಸುತ್ತ್ಯರ್ಹ ಕಾರ್ಯದಲ್ಲಿ ನಿರತವಾಗಿದೆ." ಎಂದು ಹೇಳಿದರು. ಸದ್ಭಕ್ತರು ಮಾಲಾರ್ಪಣೆ ಮತ್ತು ಪುಷ್ಪವೃಷ್ಟಿ ಮಾಡಿ 66 ದೀಪಗಳನ್ನು ಹಚ್ಚಿ ಪೂಜ್ಯ ಮಾತಾಜಿಯವರಿಗೆ ಬೆಳಗಿದರು. ಬೆಂಗಳೂರು ರಾಷ್ಟ್ರೀಯ ಬಸವ ದಳದ ವತಿಯಿಂದ ಒಂದು ಲಕ್ಷದ ಎಂಟು ಸಾವಿರ ರೂಗಳ ನಿಧಿಯನ್ನು ಬಸವ ಕಲ್ಯಾಣದ ಬಸವ ಪುತ್ಥಳಿಯ ನಿರ್ಮಾಣಕ್ಕಾಗಿ ಪೂಜ್ಯರಿಗೆ ಅರ್ಪಿಸ ಲಾಯಿತು. ಶರಣೆ.ಲೀಲಾವತಿ ಕರಡಿಯವರು ಸ್ವಾಗತಿಸಿದರು, ಕೊಯಿಮತ್ತೂರಿನ ದಾನಿ ಸಿ.ಆರ್.ಆರುಮುಗಂ ಧ್ವಜಾರೋಹಣ ಮಾಡಿದರು. ಸಚ್ಚಿದಾನಂದ ಅವರು ಸಭಾ ನಿರೂಪಣೆ ಮಾಡಿದರು, ಶರಣ.ವೀರೇಶ್ ಅವರು ಶರಣು ಸಮರ್ಪಣೆ ಮಾಡಿದರು. ಶರಣ. ಈ.ಕೃಷ್ಣಪ್ಪನವರು ಪ್ರಸಾದ ದಾಸೋಹ ಮಾಡಿಸಿದರು.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಮಹಾರಾಷ್ಟ್ರ ರಾಜ್ಯದ ಪೂನಾ ನಗರದಲ್ಲಿ ಲಿಂಗಾಯತ ಧರ್ಮದ ಹತ್ತನೆಯ ಸಮ್ಮೇಳನ

2011ರ ಮೇ 28, 29 ಮತ್ತು 30ರಂದು

ಸರ್ವರಿಗೂ ಆದರದ ಸುಸ್ವಾಗತ

ಧರ್ಮಕ್ಷೇತ್ರ ಕೂಡಲ ಸಂಗಮದ ಬಸವ ಧರ್ಮ ಪೀಠ ಮತ್ತು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ 2011ನೇ ಇಸವಿಯ ಮೇ 28, 29 ಮತ್ತು 30ರಂದು ಲಿಂಗಾಯತ ಧರ್ಮದ ಹತ್ತನೆಯ ಸಮ್ಮೇಳನವನ್ನು ಮಹಾರಾಷ್ಟ್ರ ರಾಜ್ಯದ ಪೂನಾ ನಗರದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಮೊಟ್ಟ ಮೊದಲನೆಯ ಸಮ್ಮೇಳನವು 1993ರಲ್ಲಿ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿಯಲ್ಲಿ ಜರುಗಿತು. ನಂತರ ಕ್ರಮವಾಗಿ ಹೈದರಾಬಾದ್ (1994), ಬೆಂಗಳೂರು, ಇಚಲ ಕರಂಜಿ, ನವ ದೆಹಲಿ, ಗೋಕಾಕ್, ಮುಂಬಯಿಯ ಮಹಾನಗರದಲ್ಲಿ ಸಮ್ಮೇಳನಗಳು ಜರುಗಿದವು. 1997ರಲ್ಲಿ ಭಾರತದ ಹೆಮ್ಮೆಯ ರಾಜಧಾನಿ ನವದೆಹಲಿಯ ಲಾಲ್ ಕಿಲ್ಲಾ ಮೈದಾನದಲ್ಲಿ, 2005ರಲ್ಲಿ ಲಾಲ್ ಕಿಲ್ಲಾ ಮೈದಾನಕ್ಕೆ ಹತ್ತಿರದಲ್ಲಿ ಇರುವ ದರಿಯಾಗಂಜ್‌ನ ಮಹಾವೀರ ವಾಟಿಕಾದಲ್ಲಿ ಜರುಗಿತು. 2007ರಲ್ಲಿ ಮಹಾವೀರ್ ಎನ್‌ಕ್ಲೇವ್, ಪಾಲಮ್‌ದ ಎಂ.ಸಿ.ಡಿ. ಭವನದ ಸಮೀಪದ ಮೈದಾನದಲ್ಲಿ ಜರುಗಿತು. ಒಂಬತ್ತನೆಯ ಸಮ್ಮೇಳನವನ್ನು ತಮಿಳುನಾಡಿನ ರಾಜಧಾನಿ ಚೆನ್ನಾಯ್ ಪಟ್ಟಣದಲ್ಲಿ 2009ರ ಮೇ 2, 3 ಮತ್ತು 4ರಂದು ನಡೆಸಲಾಯಿತು. ಇದೀಗ ಹತ್ತನೆಯ ಸಮ್ಮೇಳವನ್ನು ದಿ.28-ಶರಣ(ಶನಿ)ವಾರ ದಿ.29-ದೇವ(ಭಾನು)ವಾರ ಮತ್ತು ದಿ.30-ಸೋಮ (ಶಿವ)ವಾರದಂದು ಸಂಯೋಜಿಸಲಾಗಿದೆ.

ಸಮ್ಮೇಳನ ಸ್ಥಳ : ಸಮ್ಮೇಳನದ ನಡೆಯುವ ಸ್ಥಳವನ್ನು ನಂತರ ತಿಳಿಸಲಾಗುವುದು.

ವಿಶ್ವಗುರು ಬಸವಣ್ಣನವರು (1134 -1196) ಭಾರತದ ಮೊಟ್ಟ ಮೊದಲ ಸಮತಾವಾದಿ, ಸಮಾಜ ಸುಧಾರಕರು. ಅವರ ದಿವ್ಯ ಸಂದೇಶಗಳು ಎಲ್ಲ ರಾಜ್ಯಗಳಲ್ಲಿ, ಎಲ್ಲ ಭಾಷೆಗಳಲ್ಲಿ ಪ್ರಚಾರವಾಗುವುದು ಅತ್ಯಂತ ಅವಶ್ಯಕವಾಗಿದೆ. ಗುರು ಬಸವಣ್ಣನವರು ಸಂಸ್ಥಾಪಿಸಿಕೊಟ್ಟ ಲಿಂಗಾಯತ ಧರ್ಮವು ಅತ್ಯಂತ ಪ್ರಗತಿಪರ ವಿಚಾರಗಳಿಂದ ಕೂಡಿದ ರಾಷ್ಟ್ರಧರ್ಮವಾಗಿದೆ. ಇದನ್ನು ಅನುಸರಿಸುವ ಲಿಂಗಾಯತ ಧರ್ಮ ಬಾಂಧವರು ದೇಶದಲ್ಲಿ ಎಲ್ಲೆಡೆ ಚದುರಿದಂತೆ ನೆಲೆಸಿದ್ದಾರೆ. ಲಿಂಗಾಯತ ಸಮಾಜದ ಸಂಘಟನೆ ಮತ್ತು ಬಸವ ತತ್ವ ಪ್ರಚಾರದ ದೃಷ್ಟಿಯಿಂದ ಪ್ರಸ್ತುತ ಸಮ್ಮೇಳನವನ್ನು ಏರ್ಪಡಿಸಲಾಗಿದೆ.

ಭಾಗವಹಿಸುವವರಿಗೆ ಸೂಚನೆಗಳು

1. ಪ್ರತಿನಿಧಿ ಶುಲ್ಕ ಒಬ್ಬರಿಗೆ 800ರೂಗಳು. ಮೇ 27ರ ಮಧ್ಯಾಹ್ನದಿಂದ ಮೇ30 ರ ರಾತ್ರಿವರೆಗೆ ಊಟ ಮತ್ತು ವಸತಿಯ ಜವಾಬ್ದಾರಿ ಸಮ್ಮೇಳನ ಸಮಿತಿಯದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ರಾತ್ರಿಯ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತದೆ.

2. ಪೂನಾ ಮತ್ತು ಸುತ್ತಮುತ್ತ ಸಂದರ್ಶನೀಯ ಸ್ಥಳಗಳು ಬಹಳ. ಹೀಗಾಗಿ ಜನರು ಒಂದೆರಡು ದಿವಸ ಜಾಸ್ತಿ ಉಳಿದು ನಗರ ಸಂದರ್ಶನ ಮಾಡುವುದು ಅನಿವಾರ್ಯವಾಗುತ್ತದೆ. ಆಗ ಜನರು ತಮ್ಮ ಜವಾಬ್ದಾರಿ ಮೇಲೆ ವಸತಿ ಮತ್ತು ಊಟದ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ.

ಉತ್ತಮ ವಸತಿ ಗೃಹ ಪಡೆಯಲು ನೆರವು ನೀಡಲಾಗುವುದು.

3. ಪ್ರತಿನಿಧಿ ಶುಲ್ಕವನ್ನು ಆದಷ್ಟು ಬೇಗನೆ ಕಳಿಸಿ ವಿವರಗಳನ್ನು ನೀಡಬೇಕು. ಅಕ್ಕಿ, ದವಸ -ಧಾನ್ಯ, ತರಕಾರಿ ಇತ್ಯಾದಿಗಳ ಬೆಲೆ ತೀರಾ ಏರಿರುವುದರಿಂದ ಸಾಮಗ್ರಿಗಳನ್ನು ಖರೀದಿಸುವುದು ಅತ್ಯಗತ್ಯವಾಗಿರುತ್ತದೆ. ಮತ್ತು ವಸತಿ ವ್ಯವಸ್ಥೆಗಾಗಿ ಕಲ್ಯಾಣ ಮಂಟಪಗಳನ್ನು ಕಾಯ್ದಿರಿಸಬೇಕಾಗುತ್ತದೆ.

4. ಸಮ್ಮೇಳನ ಸಮಿತಿಯು ಸಾಮೂಹಿಕವಾಗಿ ವಸತಿ ವ್ಯವಸ್ಥೆಯನ್ನು ಮಾಡುತ್ತದೆ. ಪ್ರತ್ಯೇಕವಾಗಿ ಲಾಡ್ಜಿಂಗ್‌ದಲ್ಲಿ ಇರಬಯಸುವವರು ಮೊದಲೇ ತಿಳಿಸಬೇಕು. ಸಮ್ಮೇಳನ ಸ್ಥಳಕ್ಕೆ ಸಮೀಪದಲ್ಲಿರುವ ಲಾಡ್ಜಿಂಗ್ ಹುಡುಕಲಾಗುವುದು. ಲಾಡ್ಜಿಂಗ್ ಕೋಣೆಯ ಬಾಡಿಗೆ ಜೊತೆಗೆ ಸರ್ವೀಸ್ ಛಾರ್ಜು ಸೇರಿಸಲಾಗುವುದು.

ಬೇಗನೆ ಪ್ರತಿನಿಧಿ ಶುಲ್ಕವನ್ನು ಕಳಿಸಿದರೆ ಗುರುತಿನ ಚೀಟಿ (Identity Card) ಕಳಿಸಿಕೊಡಲು ಸಾಧ್ಯವಾಗುವುದು. ಅದರಲ್ಲಿ ಕ್ರಮ ಸಂಖ್ಯೆ, ಸಂಸ್ಥೆಯ ವಿಳಾಸ, ದೂರವಾಣಿ ಸಂಖ್ಯೆ ಮುಂತಾದ ವಿವರಗಳು ಇರುತ್ತವೆ.

5. ಸಮ್ಮೇಳನಕ್ಕೆ ಬಂದವರು 3 ದಿನ ತಪ್ಪದೆ ಭಾಗಿಯಾಗಿ ನಂತರ ಸುತ್ತ ಮುತ್ತಲಿನ ಸ್ಥಳ ನೋಡಲು ಹೋಗಬೇಕು. ಭಾಗವಹಿಸಿದ ಅಲ್ಲಿನ ಅತಿಥಿಗಳಿಗೆ ನಮ್ಮ ಧರ್ಮ - ಸಂಸ್ಕೃತಿ - ಸಮಾಜಗಳ ಪರಿಚಯ ಮಾಡಿಕೊಡಬೇಕೆಂಬ ಹಂಬಲ, ಉತ್ಸಾಹ ನಮ್ಮದಾಗಿರುತ್ತದೆ. ಆಗ ಪರವೂರಿಂದ ಬಂದವರು ಬರೀ ಊರು ತಿರುಗುತ್ತಿದ್ದರೆ ಪ್ರಯೋಜನವೇನು? ಕೇವಲ ಊರು ನೋಡಲು ಬರುವುದೇ ಆದರೆ ಬೇರೆ ಸಮಯದಲ್ಲಿ ಹೋಗಿ, ಬರಬಹುದು. ಆದ್ದರಿಂದ ಅನ್ಯರ ಎದುರು ನಮ್ಮ ಸಮಾಜದ ಶಿಸ್ತು, ಒಗ್ಗಟ್ಟು, ಸಂಸ್ಕೃತಿಯನ್ನು ತೋರಿಸುವುದು ಅವಶ್ಯವಿರುತ್ತದೆ.

ಪ್ರತಿನಿಧಿ ಶುಲ್ಕವನ್ನು ಜನರೇ ನೇರವಾಗಿ ಮೊದಲೇ ಕಳಿಸಿ, ಐಡೆಂಟಿಟಿ ಕಾರ್ಡ್ ಪಡೆದುಕೊಳ್ಳಬೇಕು ಅಥವಾ ವಿಶ್ವಾಸವಿರುವ ನೇತಾರರನ್ನು ಆಯ್ಕೆ ಮಾಡಿಕೊಂಡು ಅವರ ಮೂಲಕ ಭಾಗವಹಿಸುವ ಎಲ್ಲರ ಹಣವನ್ನು ಮೊದಲೇ ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬೇಕು ಅಥವಾ ಬೆಂಗಳೂರಿಗೆ ಬಂದು ನಗದು ಕಟ್ಟಿ ರಸೀತಿ ಪಡೆಯಬೇಕು.

6. ಸ್ವಯಂ ಸೇವಕರು, ರಾಷ್ಟ್ರೀಯ ಬಸವ ದಳ, ಗಣಾಚಾರ ದಳದ ಕಾರ್ಯಕರ್ತರು ನಾಲ್ಕಾರು ದಿವಸ ಮೊದಲೇ ಬಂದರೆ ಸೇವೆ ಮಾಡಲು, ಬಂದವರಿಗೆ ಸೂಚನೆ ನೀಡಲು ಅನುಕೂಲ ವಾಗುತ್ತದೆ. ಮೊದಲೇ ಬರುವ ಸಾಧ್ಯತೆ ಇರುವ ಸ್ವಯಂ ಸೇವಕರು ತಮ್ಮ ಹೆಸರುಗಳನ್ನು ಬೆಂಗಳೂರು ಕಾರ್ಯಾಲಯಕ್ಕೆ ತಿಳಿಸಬೇಕು.

7. ಸಮ್ಮೇಳನ ಪ್ರತಿನಿಧಿಗಳು ಕಡ್ಡಾಯವಾಗಿ ಬಿಳಿಯ ವಸ್ತ್ರ, ಕಾವಿಯ ಸ್ಕಾರ್ಫ್ ಮತ್ತು ಬ್ಯಾಜ್ ಧರಿಸಿರಬೇಕು. ಐಡೆಂಟಿಟಿ ಕಾರ್ಡ್ - ಗುರುತಿನ ಚೀಟಿ ಹೊಂದಿರಬೇಕು. (ಹಿಂದಿನ ಸಮ್ಮೇಳನಗಳಲ್ಲಿ ಸ್ಕಾರ್ಫ್‌ಗಳು ಕಳೆದುಕೊಂಡವರನ್ನು ಗುರುತಿಸಲು ಬಹಳ ಸಹಕಾರಿಯಾಗಿವೆ ಎಂಬುದನ್ನು ನೆನಪಿಸಿಕೊಳ್ಳಬಹುದು)

ಧನ ಸಹಾಯಕ್ಕೆ ವಿನಂತಿ

ಮಹಾರಾಷ್ಟ್ರದ ಪ್ರಮುಖ ನಗರ, ಸಾಂಸ್ಕೃತಿಕ ರಾಜಧಾನಿ ಪೂನಾದಲ್ಲಿ ಲಿಂಗಾಯತ ಧರ್ಮ ಸಮ್ಮೇಳನವನ್ನು ಸಂಯೋಜಿಸಲಾಗಿದ್ದು ಇದರ ಯಶಸ್ವಿ ನಿರ್ವಹಣೆಗಾಗಿ ಸಹೃದಯರು, ಸದ್ಭಕ್ತರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಭಕ್ತಿ ಮತ್ತು ಶಕ್ತಿ ಇರುವ ದಾನಿಗಳು ಒಂದು ಹೊತ್ತಿನ ಉಪಾಹಾರದ ಖರ್ಚು, ಮಧ್ಯಾಹ್ನದ, ರಾತ್ರಿಯ ಊಟದ ವೆಚ್ಚವನ್ನು ತಮ್ಮ ಶಕ್ತ್ಯಾನುಸಾರ ವಹಿಸಿಕೊಳ್ಳಲು ಅವಕಾಶ ಉಂಟು.

****

ಲಿಂಗಾಯತ ಧರ್ಮದ ಮೂಲ ಸಂವಿಧಾನವಾದ ಕ್ರಾಂತಿಕಾರಿ ವಚನ ಸಾಹಿತ್ಯವು ಕನ್ನಡದಲ್ಲಿದ್ದು ಇದು ಮರಾಠಿ ಭಾಷೆಯಲ್ಲೂ ಲಭ್ಯವಾಗುವಂತೆ ಮಾಡಲು ಕೆಲವು ಕೃತಿಗಳನ್ನು ಭಾಷಾಂತರಿಸಲಾಗುತ್ತಿದೆ. ಆದ್ದರಿಂದ ಗ್ರಂಥ ಪ್ರಕಟಣೆಗೆ ನೆರವಾಗುವ ದಾನಿಗಳಿಗೂ ಅವಕಾಶವಿದೆ.

12ನೆಯ ಶತಮಾನದ ಕಲ್ಯಾಣ ಕ್ರಾಂತಿಯ ನಂತರ ಚದುರಿ ಹೋದ ಕಾರಣದಿಂದಲೂ ಇತ್ತೀಚಿನ ಶತಮಾನಗಳಲ್ಲಿ ಉದ್ಯೋಗದ ನಿಮಿತ್ತ ವಿವಿಧ ರಾಜ್ಯಗಳಲ್ಲಿ ನೆಲೆಸಿದುದರಿಂದಲೂ ಮೂಲವಾಹಿನಿಯಿಂದ ಚದುರಿ ಹೋಗಿ, ಕೆಲವೊಂದು ರಾಜ್ಯಗಳಲ್ಲಿ ಅತ್ಯಂತ ಆರ್ಥಿಕ ಸಂಕಷ್ಟದಲ್ಲಿ ಇರುವ ಲಿಂಗಾಯತರನ್ನು ಸಂಘಟಿಸಲು ಮತ್ತು ಇವರಿಗೆ ಸಾಹಿತ್ಯಿಕ, ಶರಣ ಸಾಂಸ್ಕೃತಿಕ ಸಂಸ್ಕಾರ ನೀಡಲೋಸುಗವೇ ಈ ಸಮ್ಮೇಳನವನ್ನು ಸಂಯೋಜಿಸಿರುವ ಕಾರಣ ಈ ಕರಪ್ರತದ ವಿವರವನ್ನು ನಿಮ್ಮ ಬಂಧು-ಮಿತ್ರ, ಸಹ - ಧರ್ಮೀಯರಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇವೆ.

ಮಹಾ ಪೋಷಕರು	: ರೂ 10,000/-	(ಹತ್ತು ಸಾವಿರ ಹಾಗೂ ಮೇಲ್ಪಟ್ಟು)
ಪೋಷಕರು	: ರೂ 5,000/-	(ಐದು ಸಾವಿರ ಹಾಗೂ ಮೇಲ್ಪಟ್ಟು)
ವಿಶೇಷ ದಾನಿಗಳು	: ರೂ 3,000/-	(ಮೂರು ಸಾವಿರ ಹಾಗೂ ಮೇಲ್ಪಟ್ಟು)
ದಾನಿಗಳು	: ರೂ 1,000/-	(ಒಂದು ಸಾವಿರ ಹಾಗೂ ಮೇಲ್ಪಟ್ಟು)
ಪ್ರತಿನಿಧಿ ಶುಲ್ಕ	: ರೂ 800/-	(ಎಂಟು ನೂರು ಹಾಗೂ ಮೇಲ್ಪಟ್ಟು)
ಹಿತೈಷಿಗಳು	: ರೂ 500/-	(ಐದು ನೂರು ಹಾಗೂ ಮೇಲ್ಪಟ್ಟು)

ಸ್ವಯಂ ಪ್ರೇರಣೆಯಿಂದ ದೇಣಿಗೆಯನ್ನು ಎಷ್ಟಾದರೂ ಕೊಡಲು ಅವಕಾಶ ಉಂಟು. ಪ್ರಥಮ ಮಹಿಳಾ ಜಗದ್ಗುರುಗಳು, ಕೂಡಲ ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಹತ್ತನೆಯ ಲಿಂಗಾಯತ ಧರ್ಮ ಸಮ್ಮೇಳನವು ನಡೆಯಲಿದ್ದು ಅನೇಕ ರಾಜಕೀಯ ನೇತಾರರು, ಗಣ್ಯರು, ಸಮಾಜ ಬಾಂಧವರು, ಸಾಹಿತಿಗಳು, ಉಪನ್ಯಾಸಕರು, ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉದಾರವಾಗಿ ದೇಣಿಗೆ ನೀಡಿ, ಸಮ್ಮೇಳನದ ಯಶಸ್ಸಿಗೆ ಸಹಕರಿಸಲು ಕೋರುತ್ತೇವೆ.

ಪ್ರತಿನಿಧಿ ಶುಲ್ಕ, ಕಾಣಿಕೆ ಇತ್ಯಾದಿ ಕಳುಹಿಸುವವರು ಕೆಳಕಂಡಂತೆ ಬ್ಯಾಂಕ್ ಡ್ರಾಫ್ಟ್ ಬರೆಯಬೇಕು. ಪರವೂರಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.

Basava Mahamane Charitable Trust, Payable at BANGALORE.

<u>ವ್ಯವಹರಿಸುವ ವಿಳಾಸ :</u>

Basava Mahamane Charitable Trust (R)
BASAVA MANTAPA
2035, 20th Main, Chord Road, 2nd Block
Rajajinagar, BANGALORE -10, Karnataka -St
Ph : 080-23131476, 22923736

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು -07620342899
ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ -07620784855
ಕಲಾಸಂಗಮ ಪ್ರಿಂಟಿಂಗ್ ಪ್ರೆಸ್, ಇಚಲ ಕರಂಜಿ -09890126005
ಶರಣ.ರವೀಂದ್ರ ಗಂಧೆ-09890610852

****

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666



ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್
ಉಳವಿ ರಸ್ತೆ ಧಾರವಾಡ ಸಂಸ್ಥೆಯಿಂದ



ಶರಣೋತ್ಸವ ಕಾರ್ಯಕ್ರಮ

2011, ಏಪ್ರಿಲ್ 30, ಮೇ 1 ಮತ್ತು 2 ರಂದು

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ ಒಂದು ವಿಶ್ವಸ್ಥ ಸಂಸ್ಥೆ ಇದ್ದು 1968ರಲ್ಲಿಯೇ ಸ್ಥಾಪನೆಗೊಂಡಿದೆ. ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 1967ರಲ್ಲಿಯೇ ಜಮೀನನ್ನು ಖರೀದಿಸಿ ಅಕ್ಕಮಹಾದೇವಿ ಆಶ್ರಮ ನಿರ್ಮಾಣ ಆರಂಭಿಸಿದರು. ವಿಶ್ವಗುರು ಬಸವಣ್ಣನವರು ಪುರುಷರಷ್ಟೇ ಸ್ತ್ರೀಯರಿಗೂ ಧಾರ್ಮಿಕ, ಸಾಮಾಜಿಕ ಹಕ್ಕುಗಳು ಲಭ್ಯವಾಗಬೇಕೆಂಬ ಕಳಕಳಿಯಿಂದ ಮಹಿಳೆಯರಿಗೂ ಧಾರ್ಮಿಕ ಸಂಸ್ಕಾರ ಕೊಟ್ಟುದಲ್ಲದೆ, ಸಾಮಾಜಿಕ ಸಮಾನತೆಯನ್ನು ಒದಗಿಸಿದರು. ಮಹಿಳಾ ಕುಲದ ಪ್ರತಿನಿಧಿಯಾಗಿ ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಆಚಾರ್ಯ ಪದವಿಯಿಂದ ಗೌರವಿಸಲ್ಪಟ್ಟಳು.

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಅನುಭಾವ ಪೀಠವೊಂದನ್ನು ಸ್ಥಾಪಿಸಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅದಕ್ಕೆ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಪೀಠಾಧೀಶರನ್ನಾಗಿ ದಿ. 21-4-1970ರಂದು ಪೀಠಾರೋಹಣ ಮಾಡಿಸಿದರು. ಈ ಐತಿಹಾಸಿಕ ಪೀಠಾರೋಹಣವು ನಡೆದುದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು.

ಟ್ರಸ್ಟ್ ವತಿಯಿಂದ ಪ್ರಾರ್ಥನಾ ಮಂದಿರ-ಬಸವ ಮಂಟಪವನ್ನು ಮತ್ತು ದಾಸೋಹ ಶಾಲೆಯನ್ನು ಕಟ್ಟಿಸಲಾಗಿದೆ. ಪ್ರತಿ ದೇವ (ಭಾನು) ವಾರ ಶರಣ ಸಂಗಮ -ಸಾಮೂಹಿಕ ಪ್ರಾರ್ಥನೆಯು ಬೆಳಿಗ್ಗೆ 11ರಿಂದ 1-30ರವರೆಗೆ ನಡೆಯುತ್ತದೆ. ಪ್ರಾರ್ಥನೆ-ಪ್ರವಚನದ ನಂತರ ಪ್ರಸಾದ ದಾಸೋಹವಿರುತ್ತದೆ. ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆಯನ್ನು ವಿಶೇಷ ದಿನಗಳಂದು ಆಚರಿಸಲಾಗುವುದು. ಶಿವರಾತ್ರಿಯಂದು ಗಣಮೇಳವನ್ನು ಪಥ ಸಂಚಲವನ್ನು, ಬಸವ ಜಯಂತಿಯಂದು ಗುರು ಬಸವಣ್ಣನವರ ಭಾವಚಿತ್ರದ ಮೆರವಣಿಗೆಯನ್ನು ಶರಣ - ಶರಣೆಯರ ಪಥ ಸಂಚಲನವನ್ನು ಏರ್ಪಡಿಸಲಾಗುವುದು. ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮಸೇವೆ ಎಂಬ ಧರ್ಮಪಿತ ಬಸವಣ್ಣನವರ ವಾಣಿಯನ್ನು ಅನುಸರಿಸಲೋಸುಗ ಅನಾಥಾಶ್ರಮವನ್ನು ನಡೆಸಲಾಗುತ್ತಿದ್ದು 50 ಮಕ್ಕಳು ಅಭ್ಯಾಸ ಮಾಡುತ್ತಿದ್ದಾರೆ.

40 ವರ್ಷ ಕಾಲ ಅಖಂಡವಾಗಿ ಸಂಚರಿಸಿ ಧರ್ಮ ಪ್ರಚಾರ ಮಾಡಿದ ಜಂಗಮ ಮೂರ್ತಿ ಪೂಜ್ಯ ಲಿಂಗಾನಂದ ಸ್ವಾಮಿಗಳು ದಿ. 30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಕೂಡಲ ಸಂಗಮದಲ್ಲಿ ದಿ. 13-1-1992ರಂದು ಬಸವ ಧರ್ಮದ ಪರಮೋಚ್ಚ ಪೀಠವನ್ನು ಏರಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಪೂಜ್ಯ ಗುರುಗಳ ಸದಿಚ್ಛೆಯಂತೆ ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿ. 13-1-1996ರಂದು ಆರೋಹಣ ಮಾಡಿದರು. ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ದ್ವಿತೀಯ ಪೀಠಾಧೀಶರನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು 1996ರ ಅಕ್ಕನ ಹುಣ್ಣಿಮೆಯಂದು ಪೀಠಾರೋಹಣ ಮಾಡಿಸಿದರು. ಉಭಯ ಜಗದ್ಗುರುಗಳೂ ಕರ್ನಾಟಕ ಮಾತ್ರವಲ್ಲ ಇತರ

ರಾಷ್ಟ್ರಗಳಾದ ದೆಹಲಿ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳಲ್ಲಿ ಸಂಚರಿಸಿ ಪ್ರವಚನ, ಸಮ್ಮೇಳನಗಳನ್ನು ಮಾಡಿರುವುದೇ ಅಲ್ಲದೆ ಸಂಸ್ಥೆಯ ಶಾಖೆಗಳನ್ನು ಬಸವ ಮಂಟಪಗಳನ್ನು ತೆರೆದಿದ್ದಾರೆ. ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ಶರಣ ಮೇಳ, ಬಸವ ಕಲ್ಯಾಣದಲ್ಲಿ ಆಶ್ವಯುಜ ಶುದ್ಧ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು ಕಲ್ಯಾಣ ಪರ್ವ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೂಕಿನ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ಯುಗಾದಿಯಿಂದ 3 ದಿವಸಗಳ ಕಾಲ ನಡೆಸಿಕೊಂಡು ಬರುತ್ತಿರುವ ಹೆಗ್ಗಳಿಕೆ ಪೂಜ್ಯ ಮಾತಾದ್ವಯರದು.

1970ನೆಯ ಇಸವಿಯ ಚೈತ್ರ ಪೌರ್ಣಮೆಯಂದು ಪ್ರಥಮ ಪೀಠಾರೋಹಣವಾಗಿ ನಂತರ ಆಗಾಗ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆಯಾದರೂ 1910ರಿಂದ ಇನ್ನು ಮುಂದೆ ಪ್ರತಿವರ್ಷವೂ ಅಕ್ಕಮಹಾದೇವಿ ಶರಣೋತ್ಸವವನ್ನು 3 ದಿವಸಗಳ ಕಾಲ ಹಮ್ಮಿಕೊಳ್ಳಬೇಕೆಂಬ ಸಂಕಲ್ಪ ತಾಳಲಾಗಿದೆ. ಇದಕ್ಕೆ ಶರಣ ಬಂಧುಗಳ ಒತ್ತಾಸೆಯೂ ಇದೆ. ಶನಿ(ಶರಣ)ವಾರ ದಿ.30ರಂದು ಬೆಳಿಗ್ಗೆ 10-30ರಿಂದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಕಾರ್ಯಕ್ರಮದ ಉದ್ಘಾಟನೆ, ಸಂಜೆ 5-30ರಿಂದ ಧರ್ಮಚಿಂತನಗೋಷ್ಠಿ. ದಿ. 01ರಂದು ಭಾನು(ದೇವ)ವಾರ ಧಾರವಾಡ ನಗರದಲ್ಲಿರುವ ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಪಾಟೀಲ್ ಪುಟ್ಟಪ್ಪ ಸಭಾಂಗಣದಲ್ಲಿ ಬೆಳಿಗ್ಗೆ-10-30ರಿಂದ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನ, ಸಾಮೂಹಿಕ ಪ್ರಾರ್ಥನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ. ಸೋಮ(ಶಿವ) ವಾರ ದಿ.02ರಂದು ಬೆಳಿಗ್ಗೆ ವಿಶೇಷ ಪೂಜೆ. 10-30ರಿಂದ ಪೀಠಾರೋಹಣದ 40ನೆಯ ವಾರ್ಷಿಕೋತ್ಸವ, ನಂತರ ಮೆರವಣಿಗೆ, ಸಮಾರೋಪ ಸಮಾರಂಭ.

3 ದಿವಸಗಳ ಈ ಕಾರ್ಯಕ್ರಮಕ್ಕೆ ಆಗಮಿಸುವ ಶರಣ ಬಂಧುಗಳಿಗೆ ಪ್ರಸಾದ (ಊಟ) ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಸಾರ್ವಜನಿಕರಿಂದ ಆರ್ಥಿಕ ನೆರವು ಕೋರುತ್ತೇವೆ. ದೇಣಿಗೆ ಕೊಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಒಂದು ಹೊತ್ತಿನ ಉಪಾಹಾರ, ಊಟದ ಖರ್ಚನ್ನು ಒಬ್ಬೊಬ್ಬರೇ ವಹಿಸಿಕೊಳ್ಳಬಹುದು.

ಮಹಾಪೋಷಕರು	5000ರೂ	ಹಿತೈಷಿಗಳು	500ರೂ
ಪೋಷಕರು	3000ರೂ	ವಿಶೇಷ ಸದಸ್ಯರು	250ರೂ
ದಾನಿಗಳು	1000ರೂ	ಸಾಮಾನ್ಯ ಸದಸ್ಯರು	100ರೂ

ದವಸ -ಧಾನ್ಯ, ಬೆಲ್ಲ - ಸಕ್ಕರೆ ಇತ್ಯಾದಿ ಪದಾರ್ಥಗಳನ್ನು ದೇಣಿಗೆಯಾಗಿ ನೀಡಬಹುದು. ಉದಾರವಾಗಿ ದೇಣಿಗೆ ನೀಡುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಆಶಿಸುವೆವು.

ಶುಭಹಾರೈಕೆಗಳೊಡನೆ

ಶರಣ. ಸಿದ್ಧಣ್ಣ ನಟೇಗಲ್
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ ,ಧಾರವಾಡ
ಶರಣ. ಎಸ್.ಎಲ್.ಗೌಡರು, ಧಾರವಾಡ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ
ಶರಣ. ಕಲ್ಯಾಣಪ್ಪ ಪರಮಾದಿ
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ
ಶರಣ. ಕರಿಬಸಪ್ಪ ಕೋರಿಶೆಟ್ಟರು
ಅಧ್ಯಕ್ಷರು, ಯುವ ರಾಷ್ಟ್ರೀಯ ಬಸವ ದಳ
ಮೊ : 9008202994/ 9341334828

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ
ಧಾರವಾಡ -580003
ದೂ: 0836-3204121
ಶರಣ. ದೇವೇಂದ್ರಪ್ಪ ಇಂಗಳಳ್ಳಿ
ಕಾರ್ಯದರ್ಶಿ, ರಾ.ಬ.ದಳ,ಧಾರವಾಡ
ಶರಣ. ಬಸವರಾಜ ಲಿಂಗಶೆಟ್ಟರು
ಅಧ್ಯಕ್ಷರು, ಲಿಂ.ಧ.ಮಹಾಸಭಾ, ಹುಬ್ಬಳ್ಳಿ

ಗುಂಡ್ಲುಪೇಟೆಯಲ್ಲಿ ಪೂಜ್ಯ ಮಾತಾಜಿಯವರ 66ನೆಯ ವರ್ಧಂತಿ ಉತ್ಸವ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ದಿ.26-1-2011ರಂದು ಚಾಮರಾಜ ನಗರ ಜಿಲ್ಲೆಯ ಗುಂಡ್ಲುಪೇಟೆಯ ಶ್ರೀ ಮದ್ದಾನೇಶ್ವರ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ವಿಶ್ವಧರ್ಮ ಪ್ರವಚನವನ್ನು ಆರಂಭಿಸಿದರು. 45 ದಿವಸಗಳ ಕಾಲ ಅವ್ಯಾಹತವಾಗಿ ಅಖಂಡವಾಗಿ ಪ್ರವಚನವು ಸಾಗಿತು. ದಿ.12-3-2011ರಂದು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ಯವರು ಆಗಮಿಸಿ ವಿಶೇಷ ಪ್ರವಚನ ನೀಡಿದರು. ದಿ,13-3-2011ರಂದು ಪೂಜ್ಯ ಮಾತಾದ್ವಯರಿಗೆ ಭಕ್ತಿಪೂರ್ವಕವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಪ್ರವಚನ ವೇದಿಕೆಗೆ ಕರೆತರಲಾಯಿತು. ನೀಲಗಿರಿ (ತಮಿಳುನಾಡು) ಜಿಲ್ಲೆಯ ಸಕಲಟ್ಟಿ, ಊಟಿ, ದೇನಾಡು ಕಡೆಯಿಂದ, ಮೈಸೂರು ನಗರದಿಂದ ಗುಂಡ್ಲುಪೇಟೆಯ ಸುತ್ತಮುತ್ತಲಿನ ಊರುಗಳಿಂದ ಬೆಂಗಳೂರಿನಿಂದ ಸದ್ಭಕ್ತರು ಭಾಗವಹಿಸಿದ್ದರು. ದೇವನೂರಿನ ಶ್ರೀಗುರು ಮಲ್ಲೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಮಹಾಂತ ಸ್ವಾಮಿಗಳು ಬಸವ ಧ್ವಜಾರೋಹಣ ಮಾಡಿದರು. ಗುಂಡ್ಲುಪೇಟೆಯ ಶಾಸಕರಾದ ಶ್ರೀಮಹಾದೇವ ಪ್ರಸಾದ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅವರು ಪೂಜ್ಯ ಮಾತಾದ್ವಯರಿಗೆ ವಿಶೇಷವಾದ ಶಾಲು ಹೊದ್ದಿಸಿ, ಏಲಕ್ಕಿ ಮಾಲೆ ಹಾಕಿ ಸತ್ಕರಿಸಿದರು. ಮೈಸೂರು ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿ ಶರಣೆ.ಸರೋಜಮ್ಮ ನಾಗರಾಜು ಬಸವ ವಚನಾಮೃತ ಭಾಗ-2 ಎರಡನೆಯ ಆವೃತ್ತಿಯ ಬಿಡುಗಡೆ ಮಾಡಿದರು. ಗ್ರಂಥಕ್ಕೆ ಧನ ಸಹಾಯ ಮಾಡಿದ ಹಳ್ಳದ ಮಾದಹಳ್ಳಿಯ ಹೆಚ್.ಸಿ.ನಾಗರಾಜಪ್ಪ ದಂಪತಿಗಳನ್ನು ಸತ್ಕರಿಸಲಾಯಿತು. ಶರಣ.ನಾಗರಾಜಪ್ಪ ಅವರ ಮಗನಾಗಿ ಜನಿಸಿ ಬಸವ ಧರ್ಮ ಪೀಠದ ಜಂಗಮ ಮೂರ್ತಿ ಆಗಿರುವ ಪೂಜ್ಯ ಶ್ರೀ ಮಾದೇಶ್ವರ ಸ್ವಾಮಿಗಳನ್ನು ಸತ್ಕರಿಸಲಾಯಿತು. ಪುಷ್ಪವೃಷ್ಟಿ ಮಾಡಿ 66 ಆರತಿ ಬೆಳಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಅಭಿನಂದಿಸಲಾಯಿತು.

ಧಾರವಾಡ: ದಿ.13-3-2011ರಂದು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ಯವರು 65ವರ್ಷಗಳನ್ನು ಪೂರೈಸಿ 66ಕ್ಕೆ ಪಾದಾರ್ಪಣ ಮಾಡಿದುದರಿಂದ, ಅಂದು ಭಾನು(ದೇವ) ವಾರವೇ ಬಂದಿದ್ದರಿಂದ ರಾಷ್ಟ್ರೀಯ ಬಸವ ದಳಗಳ ಶಾಖೆಗಳವರು ವಿಶೇಷವಾಗಿ ತುಂಬು ಉತ್ಸಾಹದಿಂದ ಪೂಜ್ಯ ಮಾತಾಜಿಯವರ ವರ್ಧಂತಿಯನ್ನು ಆಚರಿಸಿದರು. ಧಾರವಾಡ ರಾಷ್ಟ್ರೀಯ ಬಸವ ದಳದವರು ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಬಸವ ಮಂಟಪದಲ್ಲಿ ಆಚರಿಸಿದರು. ಪೂಜ್ಯ ಮಾತಾಜಿಯವರ ಅನುಪಸ್ಥಿತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪವೃಷ್ಟಿ, ಆರತಿ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಲೋಕೋಪಯೋಗಿ ಇಲಾಖೆಯ ಕಾರ್ಯ ನಿರ್ವಾಹಕ ಅಭಿಯಂತರರಾದ ಎಂ.ಬಿ,ಗುಡಪಪ್ಪನವರು, ಜಲ ಮಂಡಳಿಯ ಕಾರ್ಯನಿರ್ವಾಹಕ ಅಭಿಯಂತರರಾದ ಎಸ್.ಬಿ.ಸಿದ್ದನಾಯಕ್, ಸಹಾಯಕ ಕಾರ್ಯ ನಿರ್ವಾಹಕ ಅಧಿಕಾರಿ ಮಹಾದೇವಯ್ಯ ಭಾಗವಹಿಸಿದ್ದರು. ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳು ಸನ್ನಿಧಿ ವಹಿಸಿದರು. ಶರಣ.ಕರಿಬಸಪ್ಪ ಕೋರಿಶೆಟ್ಟರು ಪ್ರಾಸ್ತಾವಿಕವಾಗಿ ಮಾತನಾಡಿದರು. ದಾಸೋಹ ಸೇವೆಯನ್ನು ಶರಣೆ. ವಿದ್ಯಾಪ್ರತಾಪ ನಿರ್ವಹಿಸಿದರು. ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಸಿದ್ಧಣ್ಣ ನಟೇಗಲ್ ಅತಿಥಿಗಳಾಗಿ ಸತ್ಕಾರ ಮಾಡಿದರು.

ವಚನಕಾರರ ಲಿಂಗಾಯತ ವಿಚಾರ ಪ್ರಣಾಳಿಕೆ

(ಶರಣ.ಡಾ॥ಟಿ.ಆರ್.ಚಂದ್ರಶೇಖರ್ ಅವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಉತ್ತಮ ಬರಹಗಾರರೂ ಆದ ಶ್ರೀಯುತರು ಕೂಡಲ ಸಂಗಮದಲ್ಲಿ ಇರುವ ಅಂತರ ರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದ ಮುಖ್ಯಸ್ಥರೂ ಆಗಿದ್ದಾರೆ. ಅವರು ಬರೆದ ಕೆಲವು ಲೇಖನಗಳ ಸಂಗ್ರಹ "ಲಿಂಗಾಯತ ತತ್ವ ಪ್ರಣಾಳಿಕೆ" ಶೀರ್ಷಿಕೆಯಡಿಯಲ್ಲಿ ಪ್ರಕಟಗೊಂಡಿವೆ. ಆ ವಿಚಾರಗಳು ಹೆಚ್ಚಿನ ಜನಕ್ಕೆ ತಲ್ಪಬೇಕಾಗಿದೆ. ಡಾ॥ ಚಿದಾನಂದ ಮೂರ್ತಿ ಯಂತಹ ಪುರೋಹಿತಶಾಹಿಗಳು ಲಿಂಗಾಯತ ಧರ್ಮದ ಸ್ವರೂಪವನ್ನು ಕೆಡಿಸಿ, ಗೊಂದಲವನ್ನು ಉಂಟು ಮಾಡುತ್ತಲಿರುವರು. ಪರಸ್ಪರ ಸಂಬಂಧವೇ ಇಲ್ಲದ ವೀರಶೈವ ಮತ್ತು ಲಿಂಗಾಯತ ಪದಗಳನ್ನು ಸಮಾನಾರ್ಥದಲ್ಲಿ ಬಳಸಿ ಲಿಂಗಾಯತರನ್ನು ವೀರಶೈವರನ್ನಾಗಿ ಮತಾಂತರಿಸುವಲ್ಲಿ ನಿರತರಾಗಿದ್ದಾರೆ. ಇಂಥ ಸನ್ನಿವೇಶದಲ್ಲಿ ಶರಣ.ಡಾ॥ ಚಂದ್ರಶೇಖರ್ ಅವರ ವಿಚಾರಗಳು ಬಹಳ ಪ್ರಸ್ತುತವಾಗಿರುವ ಕಾರಣ ಧಾರಾವಾಹಿಯಾಗಿ ಅವರ ಲೇಖನಗಳನ್ನು ಕೊಡಬೇಕೆಂದು ನಾವು ಇಷ್ಟಪಟ್ಟಾಗ ಅವರು ಒಪ್ಪಿಗೆ ನೀಡಿದ್ದಾರೆ. ಅದಕ್ಕಾಗಿ ಧನ್ಯವಾದ ಹೇಳಿ ಪ್ರಕಟಿಸಲಾಗುತ್ತಿದೆ. ಲೇಖಕರ ಇಚ್ಛೆಯಂತೆ ಕೂಡಲ ಸಂಗಮದೇವ ಅಂಕಿತವನ್ನು ಅವರ ಬರಹದಲ್ಲಿ ಉಳಿಸಲಾಗಿದೆ. ಈಗಾಗಲೇ ಲಿಂಗದೇವ ಪದಕ್ಕೆ ತಾತ್ವಿಕವಾಗಿ ಬೌದ್ಧಿಕವಾಗಿ, ಮಾನಸಿಕವಾಗಿ ಹೊಂದಿಕೊಂಡಿರುವವರು ತಪ್ಪು ತಿಳಿಯುವ ಅಗತ್ಯವಿಲ್ಲ.)

ವೇದ ನಡುನಡುಗಿತ್ತು.
ಯಾಕೆ?
ನಮ್ಮ ಕೂಡಲಸಂಗಯ್ಯನು
ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ.
ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತಯ್ಯಾ.
ಯಾಕೆ?
ನಮ್ಮ ಕೂಡಲ ಸಂಗಯ್ಯನು
ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ.
ತರ್ಕ ತರ್ಕಿಸಲರಿಯದೆ ಮೂಗುವಟ್ಟದ್ದಿತಯ್ಯಾ.
ಯಾಕೆ?
ನಮ್ಮ ಕೂಡಲಸಂಗಯ್ಯನು
ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ.
ಆಗಮ ಹೊರ ತೊಲಗಿ ಅಗಲಿದ್ದಿತ್ತಯ್ಯಾ.
ಯಾಕೆ?
ನಮ್ಮ ಕೂಡಲ ಸಂಗಯ್ಯನು
ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ.

ನಮ್ಮ ಕೂಡಲ ಸಂಗಯ್ಯನು
ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ
ವೇದ ನಡುನಡುಗಿತ್ತು. (ಸ.ವ.ಸಂ.1-750)

ಇದು ಬಸವಣ್ಣನವರ ಬಹು ಮುಖ್ಯ ವಚನ. ಈ ವಚನವನ್ನು ಸಂಭಾಷಣೆಯ ರೀತಿಯಲ್ಲಿ ಇಲ್ಲಿ ನೀಡಲಾಗಿದೆ. ಈ ವಚನದ ಮೂಲ ಸಂಗತಿಯನ್ನು ಮುಂಚೂಣಿಗೆ ತರುವುದು ಇಲ್ಲಿನ ಉದ್ದೇಶವಾಗಿದೆ. ಮತ್ತೊಂದು ವಚನದಲ್ಲಿ ಬಸವಣ್ಣನು "ಮಹಾದಾನಿ ಕೂಡಲಸಂಗಯ್ಯನು ಮಾದಾರ ಚನ್ನಯ್ಯನ ಮನೆಯಲ್ಲಿ ಉಂಡ, ವೇದವನೋದಿದವರು ಲಿಂಗವನೊಲಿಸಿ ತೋರಿರೋ" ಎಂದು ಮಾದಾರ ಚನ್ನಯ್ಯನನ್ನು ತನ್ನ ಪ್ರಣಾಳಿಕೆಗೆ ಸಾಕ್ಷಿಯಾಗಿ ಮಾಡಿಕೊಂಡು ತನ್ನ ಮಾದಾರ ಚನ್ನಯ್ಯ ಮೀಮಾಂಸೆಯನ್ನು ಬಸವಣ್ಣನವರು ಪ್ರತಿಪಾದಿಸಿದ್ದಾರೆ.

ಕೂಡಲ ಸಂಗಯ್ಯನು ಮಾದಾರ ಚನ್ನಯ್ಯನ ಮನೆಯಲ್ಲಿ ಉಂಡ ಕಾರಣಕ್ಕೆ ವೇದಗಳು ಯಾಕೆ ನಡುಗಬೇಕು? ಏಕೆಂದರೆ ವೇದಾಗಮದೊಳಗೆ ಮಾದಾರ ಚನ್ನಯ್ಯನಿಗೆ ಪ್ರವೇಶವಿಲ್ಲ. ಆದರೆ ಬಸವ ಸಂವಿಧಾನದಲ್ಲಿ ಕೂಡಲ ಸಂಗಯ್ಯನು ಮಾದಾರಚನ್ನಯ್ಯನ ಮನೆಯನ್ನು ಕೇವಲ ಪ್ರವೇಶಿಸುತ್ತಿಲ್ಲ. ಅಲ್ಲಿ ಊಟಮಾಡುತ್ತಿದ್ದಾನೆ. ಇದನ್ನು ವೇದಾಗಮಗಳು ಹೇಗೆ ಸಹಿಸಿಯಾವು? ಅದಕ್ಕೆ ಅವು ನಡುನಡುಗುತ್ತಿವೆ. ಇಲ್ಲಿ ವಾಸ್ತವವಾಗಿ ಬಸವಣ್ಣನವರು ಅಸ್ಪೃಶ್ಯತೆಯ ಬಗ್ಗೆ ಮಾತನಾಡುತ್ತಿದ್ದಾರೆ. ಮಾದಾರ ಚನ್ನಯ್ಯನನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದ ವೇದಗಳು ನಿಜವಾಗಲೂ ಅಸ್ಪೃಶ್ಯತೆಯನ್ನು ಆಚರಿಸುತ್ತಿವೆ. ಬಸವಣ್ಣನವರು ಅದನ್ನು ನೇರವಾಗಿ ಹೇಳುತ್ತಿಲ್ಲ. ಅದನ್ನು ಅವರು ಪ್ರತೀಕಾತ್ಮಕವಾಗಿ ಹೇಳುತ್ತಿದ್ದಾರೆ. ವೇದಾಗಮಗಳು ಬೋಧಿಸುವ ನೀತಿಗೂ ಮತ್ತು ಭಕ್ತಿಯು ನಿರೀಕ್ಷಿಸುವ ಸಂಗತಿಗಳಿಗೂ ತುಂಬಾ ಭಿನ್ನತೆಯಿದೆ. ವೇದಾಗಮಗಳು ಜನರನ್ನು ಒಳಗೊಳ್ಳುವ ಸಂಗತಿಗಳಲ್ಲ. ಬಸವಣ್ಣನವರೇ ಒಂದು ಕಡೆ ಹೇಳುವಂತೆ ವೇದಾಗಮಗಳಿಗೆ ದೀಕ್ಷೆ ಸಾಧ್ಯವೇ ವಿನಾ ಭಕ್ತಿ ಸಾಧ್ಯವಿಲ್ಲ. ಮುಂದುವರಿದು ಬಸವಣ್ಣನವರು ಹೇಳುತ್ತಾರೆ:

ವೇದಕ್ಕೆ ಒರೆಯ ಕಟ್ಟುವೆ,
ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಬಾರನೆತ್ತುವೆ,
ಆಗಮದ ಮೂಗ ಕೊಯಿವೆ, ಕೇಳಯ್ಯಾ.
ಮಹಾದಾನಿ ಕೂಡಲ ಸಂಗಮದೇವಾ
ಮಾದಾರ ಚನ್ನಯ್ಯನ ಮನೆಯ ಮಗನಾಗಿ (ಸ.ವ.ವಂ-717)

ಮಾದಾರ ಚನ್ನಯ್ಯನ ಮನೆಯ ಮಗನಾಗ ಬೇಕಾದರೆ ಬಸವಣ್ಣನವರು ವೇದಗಳನ್ನು 'ಒರೆ'ಯಲ್ಲಿಡಲೇ ಬೇಕಾಗುತ್ತದೆ. ಬಸವಣ್ಣನವರಿಗೆ ಇದ್ದ ಆಯ್ಕೆ ಎಂದರೆ ವೇದಾಗಮ ಅಥವಾ ಮಾದಾರ ಚನ್ನಯ್ಯ, ವೇದಗಳು ಮಾದಾರ ಚನ್ನಯ್ಯನನ್ನು ತಿರಸ್ಕರಿಸಿದರೆ ಜನರನ್ನು ತಿರಸ್ಕರಿಸುವ ವೇದಗಳನ್ನೇ ಬಸವಣ್ಣನವರು ತಿರಸ್ಕರಿಸುತ್ತಾರೆ. ಈ ವಚನವು ವಾಸ್ತವವಾಗಿ ಮಹಾದಾನಿ ಕೂಡಲ ಸಂಗಮದೇವಾ ಎಂಬ ಸಾಲಿಗೆ ಮುಗಿಯುತ್ತದೆ. ಆದರೆ ಬಸವಣ್ಣನವರು ಅದನ್ನು ಅಲ್ಲಿಗೆ

ನಿಲ್ಲಿಸುವುದಿಲ್ಲ. ಮುಂದುವರಿಸಿ ತಮ್ಮ ನಿರ್ಣಯಕ್ಕೆ ಮಾದಾರ ಚನ್ನಯ್ಯನನ್ನು ಸಾಕ್ಷಿಯನ್ನಾಗಿ ಮಾಡಿಕೊಳ್ಳುತ್ತಾರೆ. ಬಸವಣ್ಣನವರು ಪ್ರಜ್ಞಾಪೂರ್ವಕವಾಗಿ ಮಾದಾರ ಚನ್ನಯ್ಯನನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಇದು ಬಸವಣ್ಣನವರ ಲಿಂಗಾಯತ ವಿಚಾರ ಪ್ರಣಾಳಿಕೆ.

ಜನರನ್ನು ಒಳಗೊಳ್ಳುವ ವಿಚಾರ ಪ್ರಣಾಳಿಕೆ

ಬಸವಣ್ಣನವರು ತನ್ನನ್ನು ತಾನು 'ಮಾದಾರ ಚನ್ನಯ್ಯನ ಮನೆಯ ಮಗ'ನೆಂದು ಕರೆದು ಕೊಳ್ಳುತ್ತಾರೆ. ಇದು ಅವರಿಗೆ ಸ್ವೀಕಾರಾರ್ಹ. ಬಸವಣ್ಣನವರದು Inclusive Philo sophy'. ಅದು ಜನರನ್ನು ಒಳಗೊಳ್ಳುವ ಪ್ರಣಾಳಿಕೆ. ಅಲ್ಲಿ Social Exclusion ಗೆ ಅವಕಾಶವಿಲ್ಲ. ಅಲ್ಲಿ ಯಾರೂ ಅಸ್ಪೃಶ್ಯರಲ್ಲ, ಅಲ್ಲಿ ಯಾರೂ ಸಾಮಾಜಿಕವಾಗಿ ತಿರಸ್ಕೃತರಲ್ಲ. ಈ ಸೋಶಿಯಲ್ ಎಕ್ಸಕ್ಲೂಶನ್ ನೀತಿಯನ್ನು ಅನುಸರಿಸುತ್ತಿದ್ದ ವೇದಾಗಮ ಪ್ರಣಾಳಿಕಗೆ ಪ್ರತಿಯಾಗಿ ಬಸವಾದಿ ವಚನಕಾರರು ಸೋಶಿಯಲ್ ಇನ್‌ಕ್ಲೂಶನ್ ಪ್ರಣಾಳಿಕೆಯನ್ನು ಪ್ರತಿ ಪಾದಿಸಿದರು.

ಭವಿ - ಭಕ್ತ

ವಚನ ಸಂಸ್ಕೃತಿಯು ತನ್ನ ಸಂವಿಧಾನವನ್ನು ಒಪ್ಪಿಕೊಂಡವರನ್ನು 'ಭಕ್ತ'ರೆಂದು ಉಳಿದ ವರನ್ನು 'ಭವಿ'ಗಳೆಂದು ವರ್ಗಿಕರಿಸುತ್ತದೆ ಎನ್ನುವ ಮಾತಿದೆ. ಅಂದ ಮೇಲೆ ಇದು ಜನರನ್ನು ಒಳಗೊಳ್ಳುವ ಸಿದ್ಧಾಂತ ಹೇಗಾಯಿತು? ಎಂದು ಯಾರಾದರೂ ಪ್ರಶ್ನೆ ಕೇಳಬಹುದು. ಆದರೆ ವಚನಕಾರರು ಭವಿ -ಭಕ್ತ ಎನ್ನುವುದನ್ನು ಒಳಗಣ -ಹೊರಗಣ ಎಂಬ ನೆಲೆಯಲ್ಲಿ ಪರಿಭಾವಿಸಿ ಕೊಂಡಿಲ್ಲ. ಭವಿಗಳನ್ನು ಅದು ಪೂರ್ಣವಾಗಿ ತಿರಸ್ಕರಿಸಲಿಲ್ಲ. 'ಭವಿ' ಎನ್ನುವುದನ್ನು ವಚನ ಸಂಸ್ಕೃತಿಯು ವಿಭಿನ್ನವಾಗಿ ಪರಿಭಾವಿಸಿಕೊಂಡಿದೆ. ಅಲ್ಲಮಪ್ರಭುದೇವರು 'ಭವಿ'ಯೆನ್ನುವುದನ್ನು ಪರಿಭಾವಿಸಿಕೊಂಡಿರುವ ಬಗೆಯನ್ನು ನೋಡಬಹುದು.

ಭವಿಯ ಕಳೆದೆಹೆವೆಂಬ ಅಪ್ರಮಾಣಿಗಳು ನೀವು ಕೇಳಿರೆ,
ಭವಿಯ ಕಳೆದೆಹೆವೆಂಬ ಭವಭಾರಿಗಳು ನೀವು ಕೇಳಿರೆ,
ಭವಿಗೆ ಕೊಡಲಾಗದೆಂಬ ಭಕ್ತನ ನುಡಿಯ ಕೇಳಲಾಗದು
ನಾನು ಭವಿವಿಡಿದು ಭಕ್ತಿಯಿಂದ ಸುಖಿಯಾದೆ ಗುಹೇಶ್ವರಾ.

ಇದೇ ಬಗೆಯ ಇನ್ನೊಂದು ಅಲ್ಲಮಪ್ರಭುದೇವರ ವಚನ ಹೀಗಿದೆ.

ಭವಿಯ ಕಳೆದೆವೆಂಬ ಮರುಳು ಜನಂಗಳು ನೀವು ಕೇಳಿರೆ,
ಭವಿಯಲ್ಲವೆ ನಿಮ್ಮ ತನುಗುಣಾದಿಗಳು?
ಭವಿಯಲ್ಲವೆ ನಿಮ್ಮ ಮನಗುಣಾದಿಗಳು?
ಇವರೆಲ್ಲರೂ ಭವಿಯ ಹಿಡಿದು ಭವಭಾರಿಗಳಾದರು.
ನಾನು ಭವಿಯ ಪೂಜಿಸಿ ಭವನಾಸ್ತಿಯಾದೆನು ಗುಹೇಶ್ವರಾ.

(ಮುಂದುವರಿಯುವುದು...........)











CPMG/KA/BGW-50/2009-11 RNL NO 19980/70, Posted at MBC Bangalore GPO On 3,102, 20th of Every Month
Licencesed to Post without Prepayment WPP-17









